ಸಂಪಾದಕರ ನುಡಿ



ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

> "ಬ್ಯಾಂಕಿಂಗ್, ಪತ್ತು, ಕೃಷಿ ಸಾಲ ವಿತರಣೆ ಹೊರತು ಪಡಿಸಿದರೆ ರಸಗೊಬ್ಬರ ಪೂರೈಕೆ – ಗೋದಾಮೂಗಳ ನಿರ್ವಹಣೆ – ಕೃಷಿ ಉತ್ಪನ್ನಗಳ ಮಾರಾಟ – ರೂಪಾಂತರ – ಸಂಸ್ಕರಣೆ – ಮಾರಾಟ – ಗ್ರಾಹಕ – ವಸತಿ ವಲಯಗಳ ಬಲವರ್ಧನೆಗೆ ಕೇಂದ್ರ ಸರ್ಕಾರ ಒತ್ತು ನೀಡಬೇಕಾಗಿದೆ."

# ಸಹಕಾರ ಕ್ಷೇತ್ರದ ಪರಿಣಾಮಕಾರಿ ಸೇವೆಗೆ ಉತ್ತಮ ಪರಿಸರ ನಿರ್ಮಾಣ ಅಗತ್ಯ

ದೇಶದಲ್ಲಿ ಸಹಕಾರ ಚಳವಳಿ 115 ವರ್ಷಗಳು ತುಂಬಿದೆ. ಅಂದಾಜು 8 ಲಕ್ಷಕ್ಕೂ ಅಧಿಕ ಸಹಕಾರ ಸಂಘಗಳಿವೆ ಎಂಬ ಅಂದಾಜಿದೆ. ಲಕ್ಷಾಂತರ ಕೋಟಿ ರೂ.ಗಳ ಠೇವಣಿಗಳು ಇವೆ. 130 ಕೋಟಿ ಜನಸಂಖ್ಯೆಯಲ್ಲಿ 30 ಕೋಟಿಗೂ ಅಧಿಕ ಸದಸ್ಯ ಬಳಗವಿದೆ.

ಜನಸಂಖ್ಯೆಗೆ ಹೋಲಿಸಿದರೆ ಸದಸ್ಯ ಬಳಗ ಶೇಕಡವಾರು ಕಡಿಮೆ ಅನಿಸಿದರೂ, ಸಕ್ರಿಯ ಸದಸ್ಯರ ಸಂಖ್ಯೆ ಸಾಲದೆಂಬಂತಾಗಿದೆ. ಈ ಬಗ್ಗೆ ಸಹಕಾರಿಗಳು ಅವಲೋಕಿಸುವುದು ಅಗತ್ಯವಾಗಿದೆ.

ಇತ್ತೀಚೆಗೆ ಕೇಂದ್ರ ಸರ್ಕಾರ – ಭಾರತೀಯ ರಿಸರ್ವ್ ಬ್ಯಾಂಕಿನ ನೀತಿ – ದೋರಣೆಗಳು ಸಹಕಾರ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುವ ಹಾಗೆ ಕಾಣುತ್ತಿಲ್ಲ. ಸಹಕಾರ ಕ್ಷೇತ್ರದ ಅಳಿವು – ಉಳಿವಿನ ಪ್ರಶ್ನೆ ಸಹಕಾರ ಸಂಸ್ಥೆಗಳು, ಆಡಳಿತ ಮಂಡಳಿಗಳು ಹಾಗೂ ಸಿಬ್ಬಂದಿ ವರ್ಗ ಮತ್ತು ಸದಸ್ಯರ ಮೇಲಿದೆ.

ಸಹಕಾರ ಸಂಸ್ಥೆಗಳು ಕ್ರಿಯಾಶೀಲವಾಗಲೇಬೇಕಿದೆ. ಪಾರದರ್ಶಕ ಆಡಳಿತ ಸೇವಾ ಬದ್ಧತೆ – ಕಾರ್ಯದಕ್ಷತೆಯ ಜೊತೆಗೆ ತನ್ನ ಧ್ಯೇಯೋದ್ದೇಶಗಳನ್ನು ಈಡೇರಿಸುವ ಮೂಲಕ ಸ್ವಾವಲಂಬನೆಯ ಜೊತೆಗೆ ಚಳವಳಿಯನ್ನು ಬಲಪಡಿಸಬೇಕಾದ ಅನಿವಾರ್ಯತೆಯೂ ಇದೆ. ಇತ್ತೀಚಿನ ಸುದ್ದಿ ಮಾದ್ಯಮಗಳಲ್ಲಿ ಪ್ರಕಟವಾದಂತೆ ಪಟ್ಟಣ ಸಹಕಾರ ಬ್ಯಾಂಕುಗಳ ಮೇಲೆ ಹೆಚ್ಚಿನ ಹತೋಟಿ ಸಾಧಿಸಲು ಆರ್.ಬಿ.ಐ ಹೊರಟಿರುವುದು ಸಹಕಾರ ವಲಯ ಎತ್ತ ಸಾಗಿದೆ ಎಂದು ಅವಲೋಕಿಸ ಬೇಕಾಗಿದೆ.

ಬ್ಯಾಂಕಿಂಗ್, ಪತ್ತು, ಕೃಷಿ ಸಾಲ ವಿತರಣೆ ಹೊರತು ಪಡಿಸಿದರೆ ರಸಗೊಬ್ಬರ ಪೂರೈಕೆ – ಗೋದಾಮುಗಳ ನಿರ್ವಹಣೆ – ಕೃಷಿ ಉತ್ಪನ್ನಗಳ ಮಾರಾಟ – ರೂಪಾಂತರ – ಸಂಸ್ಕರಣೆ – ಮಾರಾಟ – ಗ್ರಾಹಕ – ವಸತಿ ವಲಯಗಳ ಬಲವರ್ಧನೆಗೆ ಕೇಂದ್ರ ಸರ್ಕಾರ ಒತ್ತು ನೀಡಬೇಕಾಗಿದೆ. ಹಲವು ಪ್ಯಾಕೇಜುಗಳನ್ನು ಘೋಷಿಸಬೇಕಿದೆ.

ಸಹಕಾರ ಕ್ಷೇತ್ರದ ಮೇಲೆ ಕೇಂದ್ರ ಸರ್ಕಾರದ ಪ್ರಭಾವ ಕಡಿಮೆಯಾಗಬೇಕಾಗಿದೆ – ಸಹಕಾರ ಸಂಸ್ಥೆಗಳು ಉತ್ತಮ ಪರಿಸರದಲ್ಲಿ ಕಾರ್ಯನಿರ್ವಹಿಸಲು, ಉದ್ಯೋಗ ಸೃಷ್ಟಿಸಲು ನೆರವಾಗಬೇಕಾಗಿದೆ. ಈ ಬಗ್ಗೆ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಸಹಕಾರಿ ಮುಖಂಡರುಗಳು ಸಹಕಾರ ವಲಯದ ಅಭಿವೃದ್ಧಿ ಭವಿಷ್ಯದ ಬಗ್ಗೆ ಚರ್ಚಿಸಿ – ಉಪಯುಕ್ತ ತೀರ್ಮಾನಗಳನ್ನು ಕೈಗೊಳ್ಳಲು ಇದು ಸಕಾಲವಾಗಿದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಬಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಹಣದುಬ್ಬರ ಕಳವಳಕಾರಿ : – ಆರ್‌ಬಿಐ ಗವರ್ನರ್

**ಮುಂಬೈ :** ಕೋವಿಡ್ ಪರಿಣಾಮಗಳಿಗೆ ಸಿಲುಕಿ ದೇಶದ ಆರ್ಥಿಕ ಬೆಳವಣಿಗೆಯು ಇನ್ನಷ್ಟು ಸಂಕುಚಿತಗೊಳ್ಳುವ ನಿರೀಕ್ಷೆ ಮಾಡಲಾಗಿದೆ. ಇಂತಹ ಸಂದರ್ಭದಲ್ಲಿ ಆಹಾರ ಮತ್ತು ಗ್ರಾಹಕ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಹಣದುಬ್ಬರವು ಏರುಮುಖವಾಗಿರುವುದು ಅತ್ಯಂತ ಕಳವಳಕಾರಿ ವಿಷಯವಾಗಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ಅಭಿಪ್ರಾಯಪಟ್ಟಿದ್ದಾರೆ.



ಆರ್‌ಬಿಐನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯ ಪ್ರಮುಖ ಅಂಶಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, 'ಬೇಡಿಕೆ ಕಡಿಮೆ ಆಗಿರುವುದರಿಂದ ತಯಾರಿಕಾ ಸಾಮರ್ಥ್ಯವೂ ತಗ್ಗಿದ್ದು, ಬಂಡವಾಳ ಹೂಡಿಕೆಯಲ್ಲಿ ಚೇತರಿಕೆ ಕಾಣುವುದು ತಡವಾಗಲಿದೆ' ಎಂದು ಹೇಳಿದ್ದಾರೆ. 'ಕೋವಿಡ್‌ನಿಂದ ಸಂಕಷ್ಟಕ್ಕೆ ಒಳಗಾಗಿರುವ ಆರ್ಥಿಕತೆಯ ಚೇತರಿಕೆಗೆ ಹಣಕಾಸು ನೀತಿಯು ಬೆಂಬಲ ನೀಡುತ್ತಾ ಬಂದಿದೆ. ಸದ್ಯದ ಮಟ್ಟಿಗೆ ಬಡ್ಡಿದರ ಕಡಿತ ಮಾಡಲು ಅವಕಾಶ ಇದೆಯಾದರೂ, ವಿವೇಚನೆಯುತ ನಿರ್ಧಾರ ತೆಗೆದುಕೊಂದು ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ. ಹಣದುಬ್ಬರ ಮತ್ತು ಆರ್ಥಿಕ ಬೆಳವಣಿಗೆಯ ಮುನ್ನೋಟದ ಬಗ್ಗೆ ಒಂದು ಸ್ಥಿರ ಲೆಕ್ಕಾಚಾರದ ಅಗತ್ಯವಿದೆ. ಆರ್ಥಿಕ ಚಟುವಟಿಕೆಗಳಿಗೆ ವೇಗ ದೊರೆತು, ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಬಗೆಹರಿದು, ಬೆಲೆಯಲ್ಲಿ ಸ್ಥಿರತೆ ಮೂಡಬೇಕಿದೆ' ಎಂದು ಹೇಳಿದ್ದಾರೆ. ಹಾಗೂ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆಯು ನಕಾರಾತ್ಮಕ ಮಟ್ಟದಲ್ಲಿ ಇರುವ ಅಂದಾಜು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಜುಲೈನಲ್ಲಿ ಚಿಲ್ಲರೆ ಹಣದುಬ್ಬರ ಶೇ.6.93ಕ್ಕೆ ಏರಿಕೆಯಾಗಿದೆ. ಜೂನ್‌ನಲ್ಲಿ ಇದು ಶೇ 6.23ರಷ್ಟಿತ್ತು. ಆಹಾರ ಹಣದುಬ್ಬರ ಶೇ.8.72ರಿಂದ ಶೇ 9.62ಕ್ಕೆ ಏರಿಕೆಯಾಗಿದೆ. ಸತತ ಎರಡನೇ ತಿಂಗಳಿನಲ್ಲಿಯೂ ಚಿಲ್ಲರೆ ಹಣದುಬ್ಬರವು ಆರ್‌ಬಿಐ ನಿಗದಿ ಮಾಡಿಕೊಂಡಿರುವ 'ಹಿತಕರ ಮಟ್ಟ'ಕ್ಕಿಂತಲೂ ಮೇಲಕ್ಕೆ ಜಿಗಿದಿದೆ. ಚಿಲ್ಲರೆ ಹಣದುಬ್ಬರವನ್ನು ಶೇ 4ಕ್ಕೆ (2 ಅಂಶ ಹೆಚ್ಚು ಅಥವಾ ಕಡಿಮೆ) ನಿಯಂತ್ರಿಸಬೇಕು ಎನ್ನುವುದು ಕೇಂದ್ರ ಸರ್ಕಾರವು ಆರ್‌ಬಿಐಗೆ ನೀಡಿರುವ ಸೂಚನೆ.

**ಸುಭಾಷಿತ :** ನಿಮ್ಮ ಮೇಲೆಯೇ ನೀವು ನಂಬಿಕೆ ಇಟ್ಟು ದೊಡ್ಡದಾಗಿ ಕನಸು ಕಂಡಾಗ ಏನನ್ನಾದರೂ ಸಾಧಿಸಬಹುದು. – ಅಲ್ಬರ್ಟ್ ಹಬರ್ಡ್

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಕೃಷಿ ಪತ್ತು ವಿತರಣೆಗೆ ಒತ್ತು ನೀಡಲು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಸಲಹೆ

**ಬೆಂಗಳೂರು :** ಬಡ ಮತ್ತು ಮಧ್ಯಮ ವರ್ಗದವರಿಗೆ ಎಲ್ಲ ರೀತಿಯ ಸಾಲಗಳು ಸುಲಭವಾಗಿ ಸಿಗುವಂತೆ ಮಾಡಲು ಸಹಕಾರಿ ಸಂಸ್ಥೆಗಳಿಗೆ ಸೂಚಿಸುವಂತೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಆವರು ಮಾತನಾಡಿ ಈ ವಿಷಯ ತಿಳಿಸಿದರು. ಬೆಳಗಾವಿ, ಕಲಬುರ್ಗಿ, ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ಜಿಲ್ಲಾ ಸಹಕಾರ ಬ್ಯಾಂಕುಗಳನ್ನು ಜನಸ್ನೇಹಿ ಬ್ಯಾಂಕುಗಳನ್ನಾಗಿ ಹಾಗೂ ಬಡ ಮತ್ತು ಮಧ್ಯಮ ವರ್ಗದವರಿಗೆ ಎಲ್ಲ ರೀತಿಯ ಸಾಲ ಸಿಗುವಂತೆ ವ್ಯವಸ್ಥೆ ಮಾಡಬೇಕು ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಈಗಾಗಲೇ 1.10 ಲಕ್ಷ ರೈತರಿಗೆ ರೂ. 842 ಕೋಟಿ ಬೆಳೆಸಾಲ ವಿತರಿಸಲಾಗಿದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಈ ವರ್ಗದವರಿಗೆ ಸಾಲ ವಿತರಿಸಲು ಎಲ್ಲ ಡಿಸಿಸಿ ಬ್ಯಾಂಕ್‌ಗಳಿಗೆ ಸೂಚನೆ ನೀಡಲಾಗಿದೆ ಎಂದು ಸೋಮಶೇಖರ್ ತಿಳಿಸಿದರು. 2019–20ನೇ ಸಾಲಿನಲ್ಲಿ 22.52 ಲಕ್ಷ ರೈತರಿಗೆ ರೂ.13,577 ಕೋಟಿ ಬೆಳೆ ಸಾಲ ವಿತರಿಸಲಾಗಿದೆ. ಸಾಲ ಮರುಪಾವತಿಯೂ ಉತ್ತಮ ಪ್ರಮಾಣದಲ್ಲಿದೆ. ರೂ.11,100 ಕೋಟಿ ಪೈಕಿ ರೂ.10,477 ಕೋಟಿ ವಸೂಲಾಗಿದ್ದು, ರೂ.634 ಕೋಟಿ ಬಾಕಿ ಉಳಿದಿದೆ. ಸಾಲ ವಸೂಲಾತಿ ಪ್ರಗತಿ ಶೇ 94 ರಷ್ಟಾಗಿದೆ ಎಂದು ಹೇಳಿದರು.

2020–21ನೇ ಸಾಲಿಗೆ 24.50 ಲಕ್ಷ ರೈತರಿಗೆ ರೂ.14,500 ಕೋಟಿ ಸಾಲ ವಿತರಿಸಲು ಉದ್ದೇಶಿಸಲಾಗಿದೆ. 4.50 ಲಕ್ಷ ಹೊಸ ಸದಸ್ಯ ರೈತರಿಗೆ ರೂ.2,500 ಕೋಟಿ ಬೆಳೆ ಸಾಲ ವಿತರಿಸಲಾಗುವುದು. ಇದರಲ್ಲಿ 1 ಲಕ್ಷ



ರೈತರಿಗೆ ರೂ.626 ಕೋಟಿ ಬೆಳೆ ಸಾಲ ಈಗಾಗಲೇ ವಿತರಿಸಲಾಗಿದೆ ಎಂದೂ ಸೋಮಶೇಖರ್ ವಿವರಿಸಿದರು.

ಕೃಷಿ, ಹೈನುಗಾರಿಕೆ, ಮೀನುಗಾರಿಕೆ ಶೂನ್ಯ ಬಡ್ಡಿ ದರದಲ್ಲಿ ರೂ.3 ಲಕ್ಷದವರೆಗೆ, ಬೆಳೆ ಸಾಲಕ್ಕೆ ಶೂನ್ಯ ಬಡ್ಡಿ ದರದಲ್ಲಿ ರೂ.3 ಲಕ್ಷದವರೆಗೆ ಸಾಲ ವಿತರಿಸಲಾಗುವುದು ಎಂದರು.

ಕೊರೊನಾ ಸಂದರ್ಭದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಆಶಾ ಕಾರ್ಯಕರ್ತೆಯರಿಗೆ ತಲಾ ರೂ.3,000ದಂತೆ 42,537 ಕಾರ್ಯಕರ್ತೆಯರ ಪೈಕಿ 41,836 ಕಾರ್ಯಕರ್ತೆಯರಿಗೆ ಪರಿಹಾರದ ಹಣ ವಿತರಿಸಲಾಗಿದೆ. ಉಳಿದ 695 ಕಾರ್ಯಕರ್ತೆಯರಿಗೆ ಶೀಘ್ರವೇ ವಿತರಿಸಲಾಗುವುದು ಎಂದೂ ಸಚಿವರು ತಿಳಿಸಿದರು. ಈ ಸಂದರ್ಭದಲ್ಲಿ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಸಹಕಾರ ಸಂಘಗಳ ನಿಬಂಧಕ ಎಸ್. ಜಿಯಾವುಲ್ಲಾ ಅವರು ಸೇರಿದಂತೆ ಸಹಕಾರ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.

## ಮುಂದಿನ ವರ್ಷ ಮಾರ್ಚ್ 31ರೊಳಗೆ ತೆರಿಗೆ ವಂಚಕರ 18 ಕೋಟಿ ಪಾನ್‌ಕಾರ್ಡ್ ನಿಷ್ಕ್ರಿಯ

**ನವದೆಹಲಿ :** ಕೇಂದ್ರ ಸರ್ಕಾರ ಆದಾಯ ತೆರಿಗೆಯಿಂದ ತಪ್ಪಿಸಿಕೊಳ್ಳುವವರನ್ನು ಹಿಡಿಯಲು ಬಲೆ ಬೀಸಿದೆ. ಹಲವು ಪಾನ್‌ಕಾರ್ಡ್‌ಗಳನ್ನು ಬಳಸಿ, ದೊಡ್ಡ ದೊಡ್ಡ ವ್ಯವಹಾರ ಮಾಡಿ, ತೆರಿಗೆ ವಂಚಿಸುತ್ತಿದ್ದವರನ್ನು ಪತ್ತೆಹಚ್ಚಲು ಆದಾಯ ತೆರಿಗೆ ಇಲಾಖೆ, ಕೃತಕ ಬುದ್ಧಿಮತ್ತೆಯ ಮೊರೆಹೋಗಿದೆ.




ಎಲ್ಲ ಲೆಕ್ಕಾಚಾರದ ಪ್ರಕಾರ ನಡೆದರೆ ಮುಂದಿನ ವರ್ಷ ಮಾ.31ರೊಳಗೆ 18 ಕೋಟಿ ಅಕ್ರಮ ಪಾನ್‌ಕಾರ್ಡ್‌ಗಳು ನಿಷ್ಕ್ರಿಯಗೊಳ್ಳಲಿವೆ.

ಈ ಕಾರ್ಡ್‌ಗಳನ್ನು ಹೊಂದಿರುವವರು ಆಧಾರ್ ಕಾರ್ಡ್‌ನೊಂದಿಗೆ ಜೋಡಿಸಿಕೊಂಡರೆ ಮಾತ್ರ, ಬಚಾವಾಗಲಿದ್ದಾರೆ. ಆದರೆ ಒಂದಕ್ಕಿಂತ ಹೆಚ್ಚು ಪಾನ್‌ಹೊಂದುವುದು ಸಾಧ್ಯವಿಲ್ಲದ ಕಾರಣ, ಜೋಡಣೆಯೂ ಸಹಜವಾಗಿಯೇ ಸಾಧ್ಯವಾಗುವುದಿಲ್ಲ. ಅಲ್ಲಿಗೆ ಈ ಪಾನ್‌ಕಾರ್ಡ್‌ಗಳಿಗೆ ಇತಿಶ್ರೀ ಹಾಡುವುದು ಖಚಿತ. ಬೇರೆಬೇರೆ ಮಾರ್ಗದಲ್ಲಿ ಆದಾಯ ತೆರಿಗೆ ತಪ್ಪಿಸಿಕೊಳ್ಳುವವರ ಪತ್ತೆಗೂ ಕೇಂದ್ರ ಮುಂದಾಗಿದೆ. ದೊಡ್ಡದೊಡ್ಡ ವ್ಯವಹಾರ, ಐಷಾರಾಮಿ ವಸ್ತುಗಳಿಗೆ ಹಣ ಖರ್ಚು ಮಾಡುವ ವ್ಯಕ್ತಿಗಳು, ತಮ್ಮ ಆದಾಯ ಮುಚ್ಚಿಟ್ಟು ತೆರಿಗೆ ಮಾತ್ರ ತಪ್ಪಿಸಿಕೊಳ್ಳುತ್ತಿದ್ದಾರೆ. ಅಂತಹವರ ವ್ಯವಹಾರಗಳನ್ನು ಪತ್ತೆಹಚ್ಚಲು ಕೇಂದ್ರ ತೀರ್ಮಾನಿಸಿದೆ.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.,

ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

ದೂ. 080-23564444, 23464033, 23464034 ಇ-ಮೇಲ್: info@ksccsf.org & ksccsfltd@gmail.com


ಸಂಖ್ಯೆ:ಕ.ರಾ.ಸ.ಪ.ಸಂ.ಮ.ನಿ/2020-21 ದಿನಾಂಕ : 31-08-2020

## ಸಹಕಾರಿಗಳಲ್ಲಿ ಮನವಿ

ಗೆ,

**ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ**

**ಮುಖ್ಯಕಾರ್ಯನಿರ್ವಹಣಾಧಿಕಾರಿಗಳು**

\- - - - - - - - - - - - - - - - -

\- - - - - - - - - - - - - - - - -

\- - - - - - - - - - - - - - - - -

**ವಿಷಯ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.,**
**ಇದರ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡುವ ಕುರಿತು ಮನವಿ.**

-----***-----

ಮಾನ್ಯರೇ,

ನಿವೃತ್ತ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಹಕಾರಿ ರತ್ನ ಪುರಸ್ಕೃತರು ಆದ ಸನ್ಮಾನ್ಯ "ಶ್ರೀ ಬಿ.ಎಲ್.ಲಕ್ಕೇಗೌಡ"ರವರ ಪರಿಶ್ರಮದಿಂದ ಕರ್ನಾಟಕ ರಾಜ್ಯದ ಪತ್ತಿನ ಸಹಕಾರ ಸಂಘಗಳ ಸರ್ವತೋಮುಖ ಅಭಿವೃದ್ದಿಗೆ ಮತ್ತು ಒಕ್ಕೂಟ ವ್ಯವಸ್ಥೆಯ ಉದ್ದೇಶಕ್ಕೆ ಈ ಮಹಾಮಂಡಳವು 2004ರಲ್ಲಿ ಸ್ಥಾಪನೆಯಾಗಿತ್ತು. ಪ್ರಾರಂಭದಲ್ಲಿ ಶ್ರೀ ಬಿ.ಎಲ್.ಲಕ್ಕೇಗೌಡ ರವರು ಅಧ್ಯಕ್ಷರಾಗಿ ಹಾಗೂ ಶ್ರೀ ವಿ.ರಾಜು ರವರು ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಸಂಘಗಳ ಅಭಿವೃದ್ದಿಗೆ ಶಿಕ್ಷಣ ತರಬೇತಿ, ಮಾರ್ಗದರ್ಶನದ ಜೊತೆ ಜೊತೆಗೆ ಸಹಕಾರ ಸಂಘಗಳ ಸಮಸ್ಯೆ ಮತ್ತು ಆಶೋತ್ತರಗಳಿಗೆ ಸ್ಪಂದಿಸಿ ಕಾರ್ಯನಿರ್ವಹಿಸುತ್ತಿದ್ದು, ಲೆಕ್ಕಪರಿಶೋಧಕರ ವರದಿಯಲ್ಲಿ "ಎ" ದರ್ಜೆಯ ಮಹಾಮಂಡಳವಾಗಿ ಗುರುತಿಸಿಕೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಮಗೆ ತಿಳಿಸಲು ಹರ್ಷಿಸುತ್ತೇವೆ.

ಪ್ರಸ್ತುತ ಮಹಾಮಂಡಳವು ಮೇಲ್ಕಂಡ ವಿಳಾಸದ ಕಟ್ಟಡವನ್ನು ಲೀಸ್‌ಗೆ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿದ್ದು, ಮಹಾಮಂಡಳವು ಸ್ವಂತ ಕಟ್ಟಡ ಹೊಂದುವ ಉದ್ದೇಶದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿ.ಡಿ.ಎ) ವ್ಯಾಪ್ತಿಯಲ್ಲಿನ ನಂದಿನಿ ಬಡಾವಣೆ, ಬೆಂಗಳೂರು ಇಲ್ಲಿ 3594.38 ಚದರ ಅಡಿಯ ಮೂಲೆ ನಿವೇಶನವನ್ನು ಇ-ಹರಾಜು ಪ್ರಕ್ರಿಯೆಯ ಮೂಲಕ ಖರೀದಿಸಿದ್ದು ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಲು ಅಂದಾಜು

ಸುಮಾರು ರೂ. 2.5 ಕೋಟಿ ರೂಗಳ ಅಂದಾಜು ವೆಚ್ಚ ಸಿದ್ದಪಡಿಸಿದ್ದು.

ಕಟ್ಟಡ ನಿರ್ಮಾಣ ಕಾರ್ಯದ ಉದ್ದೇಶ ಸಾಧನೆಗೆ ಮಾನ್ಯ ಸದಸ್ಯ ಸಹಕಾರ ಸಂಘಗಳ ಆಡಳಿತಮಂಡಳಿಯವರ ಮಾರ್ಗದರ್ಶನ ಮತ್ತು ಆರ್ಥಿಕ ಧನ ಸಹಾಯ ಅತೀ ಮುಖ್ಯವಾಗಿದ್ದು, ತಾವುಗಳು ತಮ್ಮ ಸಹಕಾರ ಸಂಘದ ಮೂಲಕ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಆರ್ಥಿಕ ನೆರವು ನೀಡಲು ಈ ಮೂಲಕ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ.

25,000/–ರೂ ಗಳಿಗೂ ಹೆಚ್ಚು ದೇಣಿಗೆ ನೀಡಿದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಹೆಸರುಗಳನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಿ ಶಾಶ್ವತವಾಗಿ ಸಾರ್ವಜನಿಕವಾಗಿ ಉಳಿಯುವಂತೆ ಮಾಡಲು ಆಡಳಿತಮಂಡಳಿ ತೀರ್ಮಾನಿಸಿರುತ್ತದೆ.

ಆದುದರಿಂದ ಸಹಕಾರಿ ಬಂಧುಗಳಾದ ತಾವುಗಳು ತಮ್ಮ ಸಹಕಾರ ಸಂಘದ ಮೂಲಕ ಕಟ್ಟಡ ನಿಧಿಗೆ ಹೆಚ್ಚಿನ ಮಟ್ಟದಲ್ಲಿ ದೇಣಿಗೆ ನೀಡಿ ಸುಸಜ್ಜಿತ ಹಾಗೂ ಆಧುನಿಕ ವಿನ್ಯಾಸದ ಕಟ್ಟಡ ನಿರ್ಮಾಣಕ್ಕೆ ಸಹಾಯ ಮಾಡಿ ಸಹಕರಿಸಲು ಮಹಾಮಂಡಳದ ಆಡಳಿತಮಂಡಳಿ ಸದಸ್ಯರುಗಳ ಪರವಾಗಿ ತಮ್ಮಲ್ಲಿ ಹಾಗೂ ತಮ್ಮ ಆಡಳಿತಮಂಡಳಿ ಸದಸ್ಯರುಗಳಲ್ಲಿ ಕೋರುತ್ತೇವೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿಗಳು,

| | |
|---|---|
| (ಸಹಿ/–) | (ಸಹಿ/–) |
| **ಡಾ. ಬಿ.ಡಿ. ಭೂಕಂತ** | **ಕೆ.ಲಲಿತ ಜಿ.ಟಿ.ದೇವೇಗೌಡ** |
| ಉಪಾಧ್ಯಕ್ಷರು | ಅಧ್ಯಕ್ಷರು |

ದೇಣಿಗೆಯನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಇದರ ಈ ಕೆಳಗೆ ನಮೂದಿಸಿದ ಬ್ಯಾಂಕಿನ ಖಾತೆಗೆ ಚೆಕ್, ಡಿ.ಡಿ, ಆರ್.ಟಿ.ಜಿ.ಎಸ್ ಅಥವಾ ಎನ್.ಇ.ಎಫ್.ಟಿ ಮೂಲಕ ನೀಡಲು ಕೋರುತ್ತೇವೆ.

1. ಬ್ಯಾಂಕಿನ ಹೆಸರು : The Karnataka State Co-op. Apex Bank Ltd.,
2. ಖಾತೆಯ ಹೆಸರು : Karnataka State Co-op. Credit Societies Federation Ltd.,
3. ಖಾತೆ ಸಂಖ್ಯೆ : 1014111030000018
4. ಖಾತೆಯ ವಿಧಾನ : Current Account
5. ಶಾಖೆಯ ಹೆಸರು : Vyalikaval Branch, Bangalore-560003
6. ಐ.ಎಫ್.ಎಸ್.ಸಿ. ಕೋಡ್ : KSCB 0000001

# ಶ್ರೀ ಪಾರ್ವತಿ-ಪರಮೇಶ್ವರ ಸಹಕಾರಿ ಸಂಘಕ್ಕೆ ಅವಿರೋಧ ಆಯ್ಕೆ



ಶಂಕರಲಿಂಗಪ್ಪ ಎಸ್. ಮಂಕಣಿ
ಅಧ್ಯಕ್ಷರು

**ಕಮತಗಿ :** ಪಟ್ಟಣದ ಶ್ರೀ ಪಾರ್ವತಿ-ಪರಮೇಶ್ವರ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ಐದು ವರ್ಷಗಳ ಅವಧಿಗೆ ನೂತನ ಅಧ್ಯಕ್ಷರಾಗಿ ಶಂಕರಲಿಂಗಪ್ಪ ಎಸ್. ಮಂಕಣಿ ಹಾಗೂ ಉಪಾಧ್ಯಕ್ಷರಾಗಿ ಗುರುನಾಥ ಎಸ್. ಜಾಪಾಳ ಅವರು ಅವಿರೋಧ ಆಯ್ಕೆಯಾಗಿದ್ದಾರೆ. ನಿರ್ದೇಶಕರುಗಳಾಗಿ ಗುರುಸಿದ್ದಪ್ಪ ಎ. ಶಿರೂರ, ನಾಗೇಶ ಎಂ. ಹುಲ್ಲೂರ, ಸಂಗಮೇಶ ಆಯ್. ಕೊಳ್ಳಿ, ದೊಡ್ಡಪ್ಪ ವಾಯ್. ಬಡಕನ್ನವರ, ಮಲ್ಲೇಶ ಆಯ್. ಹುಬ್ಬಳ್ಳಿ, ಅಭಿಷೇಕ ವಿ. ಬಾಚಾಳ, ಸುರೇಶ ಎಸ್. ಹಳ್ಳದ, ಯಲ್ಲಪ್ಪ ಎಂ. ವಡ್ಡರ, ಗಂಗಮ್ಮ ಜಿ. ಗೌಡರ, ಇಂದ್ರಾ ಶಣ್ಮುಖಪ್ಪ ಹೆಬ್ಬಾಳ ಅವರು ಅವಿರೋಧ ಆಯ್ಕೆಯಾಗಿರುತ್ತಾರೆ.



ಗುರುನಾಥ ಎಸ್. ಜಾಪಾಳ
ಉಪಾಧ್ಯಕ್ಷರು

# ಬ್ಯಾಂಕ್ ಖಾಸಗೀಕರಣಕ್ಕೆ ವೇಗ




**ನವದೆಹಲಿ :** ಸರ್ಕಾರಿ ಸ್ವಾಮ್ಯದ ನಾಲ್ಕು ಬ್ಯಾಂಕ್‌ಗಳಲ್ಲಿ ಸರ್ಕಾರ ಹೊಂದಿರುವ ಷೇರುಗಳ ಪ್ರಮಾಣವನ್ನುಕಡಿಮೆ ಮಾಡುವ ಪ್ರಕ್ರಿಯೆಗೆ ಈ ಹಣಕಾಸು ವರ್ಷ ಕೊನೆಗೊಳ್ಳುವ ಮೊದಲು ವೇಗ ನೀಡುವಂತೆ ಪ್ರಧಾನ ಮಂತ್ರಿಯವರ ಕಾರ್ಯಾಲಯವು ಅಧಿಕಾರಿಗಳಿಗೆ ಸೂಚನೆ ನೀಡಿದೆ. ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್, ಬ್ಯಾಂಕ್ ಆಫ್ ಮಹಾರಾಷ್ಟ್ರ, ಯುಕೋ ಬ್ಯಾಂಕ್ ಮತ್ತುಐಡಿಬಿಐ ಬ್ಯಾಂಕ್‌ಗಳಲ್ಲಿ ತನ್ನ ಪಾಲನ್ನುಕಡಿಮೆ ಮಾಡಿಕೊಳ್ಳಲು ಸರ್ಕಾರ ಮುಂದಾಗಿದೆಎಂದು ಮೂಲಗಳು ತಿಳಿಸಿವೆ. ಈ ಬ್ಯಾಂಕುಗಳ ಖಾಸಗೀಕರಣ ಪ್ರಕ್ರಿಯೆಗೆ ವೇಗ ನೀಡುವಂತೆ ಸೂಚಿಸಿ ಪ್ರಧಾನ ಮಂತ್ರಿಯವರಕಾರ್ಯಾಲಯವು, ಕೇಂದ್ರ ಹಣಕಾಸು ಸಚಿವಾಲಯಕ್ಕೆ ಪತ್ರ ಬರೆದಿದೆ.

# ವಾಟ್ಸ್‌ಆಪ್ ಮೂಲಕ ಮನೆ ಬಾಗಿಲಿಗೆ ಬರಲಿದೆ ಎಟಿಎಂ ಸೇವೆ




**ನವದೆಹಲಿ :** ಬ್ಯಾಂಕ್ ಗ್ರಾಹಕರು ಇನ್ನುಮುಂದೆ ಹಣವನ್ನು ಪಡೆಯಲು ಎಟಿಎಂ ಬಳಿಗೆ ಹೋಗಬೇಕಾಗಿಲ್ಲ. ಬದಲಿಗೆ ಎಟಿಎಂ ಯಂತ್ರವು ನಿಮ್ಮ ಮನೆಗೆ ಹಣ ಪಾವತಿಸಲು ಬರಲಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತನ್ನ ಗ್ರಾಹಕರಿಗಾಗಿ ಈ ನೂತನ ಸೇವೆ ಆರಂಭಿಸಿದೆ. ಕೇವಲ ಒಂದು ವಾಟ್ಸ್ ಆಪ್ (WhatsApp) ಸಂದೇಶದ ಸಹಾಯದ ಮೂಲಕ ನೀವು ಎಟಿಎಂ ಯಂತ್ರವನ್ನು ನಿಮ್ಮ ಮನೆಬಾಗಿಲಿಗೆ ಕರೆಯಿಸಿಕೊಳ್ಳಬಹುದು.

**ಎಸ್.ಬಿ.ಐ. ಎಟಿಎಂ ಸೇವೆ :** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇದೀಗ ತನ್ನ ಮೊಬೈಲ್ ಎಟಿಎಂ ಯಂತ್ರಗಳನ್ನು ಮನೆ ಮನೆಗೆ ಕಳುಹಿಸಲು ನಿರ್ಧರಿಸಿದೆ. ಇದಕ್ಕಾಗಿ, ಎಸ್.ಬಿ.ಐ. ನಿಮ್ಮ ಬೇಡಿಕೆಯ ಮೇರೆಗೆ, ನಿಮ್ಮ ಮನೆ ಬಾಗಿಲಲ್ಲಿ ಎಟಿಎಂ ಸೇವೆಯನ್ನು ಪ್ರಾರಂಭಿಸಿದೆ. ನೀವು ನಮಗೆ ವಾಟ್ಸಾಪ್ ನೀಡಿ ಮತ್ತು ನಾವು ಎಟಿಎಂ ಯಂತ್ರವನ್ನು ನಿಮ್ಮ ಮನೆಯ ಮುಂದೆ ತರುತ್ತೇವೆ ಎಂದು ಬ್ಯಾಂಕ್ ಗ್ರಾಹಕರಿಗೆ ತಿಳಿಸಿದೆ. ಮೊಬೈಲ್ ಎಟಿಎಂ ಮನೆಗೆ ಕರೆಯಿಸಿಕೊಳ್ಳಲು ನೀವು ಬ್ಯಾಂಕಿಗೆ ಕರೆ ಮಾಡಬಹುದು ಎಂದು ಗ್ರಾಹಕರಿಗೆ ತಿಳಿಸಲಾಗಿದೆ. ಎಸ್.ಬಿ.ಐ. ಈ ನೂತನ ಸೇವೆಯನ್ನು ಲಖನೌನಲ್ಲಿ ಪ್ರಾರಂಭಿಸಿದೆ. ಇನ್ಮುಂದೆ ಮಿನಿಮಮ್ ಬ್ಯಾಲೆನ್ಸ್ ಹಾಗೂ SMS ಚಾರ್ಜ್‌ಗಳೂ ಸಹ ನಿಮಗೆ ಬೀಳುವುದಿಲ್ಲ. ಇತ್ತೀಚೆಗಷ್ಟೇ ತನ್ನ ನಿಯಮಗಳಲ್ಲಿ ಬದಲಾವಣೆ ಮಾಡಿರುವ ಭಾರತೀಯ ಸ್ಟೇಟ್ ಬ್ಯಾಂಕ್, ತನ್ನ ಗ್ರಾಹಕರಿಗೆ ವಿಧಿಸುತಿದ್ದ SMS ಶುಲ್ಕ ಹಾಗೂ ಮಿನಿಮಮ್ ಬ್ಯಾಲೆನ್ಸ್ ಶುಲ್ಕವನ್ನು ತೆಗೆದು ಹಾಕಿದೆ. ಇತ್ತೀಚೆಗಷ್ಟೇ ಭಾರತೀಯ ಸ್ಟೇಟ್ ಬ್ಯಾಂಕ್ ಟ್ವೀಟ್ ಮಾಡುವ ಮೂಲಕ ಈ ಮಾಹಿತಿ ನೀಡಿದೆ. ಬ್ಯಾಂಕಿನ ಸುಮಾರು 44 ಕೋಟಿಗಿಂತ ಅಧಿಕ ಉಳಿತಾಯ ಖಾತೆದಾರರಿಗೆ ಈ ಸೌಲಭ್ಯ ಸಿಗಲಿದೆ.

# ಸಹಕಾರ ಸಂಘಗಳ ಕಾಯಿದೆ, 1959ರ ತಿದ್ದುಪಡಿಗಳ ಅವಲೋಕನ

▸▸ ಶ್ರೀ ಎ.ಸಿ. ದಿವಾಕರ, ಕೆ.ಸಿ.ಎಸ್, ಸಹಕಾರ ಸಂಘಗಳ ಅಪರ ನಿಬಂಧಕರು

2012:97ನೇ ಸಂವಿಧಾನ ತಿದ್ದುಪಡಿ ಆರ್ಟಿಕಲ್ (19) (1) ಪ್ರತಿಯೊಬ್ಬ ಭಾರತೀಯ ಪ್ರಜೆಯು ಸಹಕಾರ ಸಂಘವನ್ನು ರಚಿಸಿಕೊಳ್ಳುವುದು ಮೂಲಭೂತ ಹಕ್ಕು. ಸಹಕಾರ ಸಂಘಗಳ – ಸ್ವ ಇಚ್ಚೆಯ ರಚನೆ – ಸ್ವಾಯತ್ತ ಕಾರ್ಯಾಚರಣೆ – ಪ್ರಜಾಸತ್ತಾತ್ಮಕ ಹತೋಟಿ – ವೃತ್ತಿಪರ ಆಡಳಿತ ಇವುಗಳನ್ನು ರಾಜ್ಯವು ಪ್ರೋತ್ಸಾಹಿಸಬೇಕು ಎಂಬುದು ಸಂವಿಧಾನದ ತಿದ್ದುಪಡಿಯ ಆಶಯ

**ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959**

- ಕರ್ನಾಟಕ ರಾಜ್ಯದಲ್ಲಿ ಸಹಕಾರ ಸಂಘಗಳ ಸ್ವಯಂಪ್ರೇರಿತ ರಚನೆ, ಸ್ವಾಯತ್ತ ಕಾರ್ಯನಿರ್ವಹಣೆ, ಪ್ರಜಾಸತ್ತಾತ್ಮಕ ನಿಯಂತ್ರಣ ಮತ್ತು ವೃತ್ತಿಪರ ವ್ಯವಸ್ಥಾಪನೆಯ ಸಂವರ್ಧನೆಗೆ ಪ್ರೋತ್ಸಾಹ ನೀಡುವ ಅಧಿನಿಯಮ.
- ಶಾಸನಸಭೆ... ಕಾಯಿದೆಯನ್ನು ರೂಪಿಸುತ್ತದೆ. ಸರ್ಕಾರ... ನಿಯಮಗಳನ್ನು ರಚಿಸುತ್ತದೆ. ಸಂಘವು... ಉಪನಿಯಮಗಳನ್ನು ರೂಪಿಸುತ್ತದೆ.
- ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, 1959 ಈ ಕಾಯಿದೆಯಲ್ಲಿ... 132 ಸೆಕ್ಷನ್‌ಗಳು ಮತ್ತು 56 ನಿಯಮಗಳಿವೆ.
- ಕಲಂ 12(5) ಮತ್ತು 12(6)ನ್ನು ಬೈಲಾ ತಿದ್ದುಪಡಿ ಬಗ್ಗೆ ಮತ್ತೆ ಸೇರಿಸಲಾಗಿದೆ.
- ಸದಸ್ಯತ್ವ ಪಡೆಯುವುದು ಮೂಲಭೂತ ಹಕ್ಕು. ಎರಡು ತಿಂಗಳೊಳಗೆ ತೀರ್ಮಾನವನ್ನು ಲಿಖಿತವಾಗಿ ತಿಳಿಸತಕ್ಕದ್ದು.– ಸದಸ್ಯತ್ವ ತಿರಸ್ಕರಿಸಿದ ಸಹಕಾರ ಸಂಘದ ವಿರುದ್ಧ ನಿಬಂಧಕರಿಗೆ ಮೇಲ್ಮನವಿ ಸಲ್ಲಿಸಬಹುದು.
- ಕಲಂ. 16 : ಸಂಘದ ಕಾರ್ಯಕ್ಷೇತ್ರದಲ್ಲಿ ವಾಸವಾಗಿರುವುದು, ಕಡ್ಡಾಯ ಸದಸ್ಯತ್ವದ ಬಗ್ಗೆ ತೀರ್ಮಾನಿಸಲು 2 ತಿಂಗಳ ಅವಧಿ

**ಕಲಂ 17 : ಸದಸ್ಯತ್ವ ಅನರ್ಹತೆ**

- ಕಲಂ 16 ರಲ್ಲಿ ಸದಸ್ಯನಾಗಲು ಅರ್ಹನಿಲ್ಲದಿದ್ದರೆ.
- ಸಂಘದ ಅಥವಾ ಹಣ ಪೂರೈಸುವ ಸಂಸ್ಥೆಯ ನೌಕರನಾಗಿದ್ದರೆ.
- ನಿರ್ದಿಷ್ಟಪಡಿಸಿದ ವ್ಯವಹಾರ ಮಾಡದಿದ್ದರೆ, ಮೂರು ವರ್ಷಗಳು ಸೇವೆ ಉಪಯೋಗಿಸದಿದ್ದರೆ.
- ವೇತನ ಪಡೆಯುವ ನೌಕರ ಅಥವಾ ಹಣಕಾಸು ಸಂಸ್ಥೆಯ ನೌಕರ

ಕಲಂ–18 ಸಹಕಾರ ಸಂಘದ ಸಹಸದಸ್ಯರ ಸಂಖ್ಯೆಯು ಒಟ್ಟು ಸದಸ್ಯ ಸಂಖ್ಯೆಯ ಶೇ. 15ರಷ್ಟನ್ನು ಮೀರುವಂತಿಲ್ಲ. ಮೀರಿದರೆ... ಸದಸ್ಯರಾಗಲು ಅರ್ಹತೆ ಇರುವವರನ್ನು 6 ತಿಂಗಳ ಒಳಗೆ ಸದಸ್ಯರನ್ನಾಗಿ ಮಾಡಿಕೊಂಡು, ಅನರ್ಹರನ್ನು ತೆಗೆದುಹಾಕಬೇಕು.

**ಕಲಂ–18(ಬಿ) ಹೊಸ ಸೇರ್ಪಡೆ :** ಮಾಧ್ಯಮಿಕ, ಫೆಡರಲ್ ಮತ್ತು ರಾಜ್ಯ ಮಟ್ಟದ ಸಹಕಾರ ಸಂಘಗಳ ನಿರ್ದೇಶಕತ್ವ ಈ ಕೆಳಕಂಡ ಸಂದರ್ಭದಲ್ಲಿ ಅಂತ್ಯವಾಗುವುದು.

- ಪ್ರಾಥಮಿಕ ಸಂಘದ ನಿರ್ದೇಶಕ ಸ್ಥಾನವನ್ನು ಕಳೆದುಕೊಂಡಾಗ – ನಾಮನಿರ್ದೇಶನವನ್ನು ಸಂಘವು ಹಿಂತೆಗೆದುಕೊಂಡಾಗ – ಕಲಂ–30 ಅಥವಾ ಕಲಂ–31ರಂತೆ ನಿರ್ದೇಶಕನಾಗಿರುವ ಸಂಘದ ಆಡಳಿತ ಮಂಡಳಿ ರದ್ಧತಿಯಾದಾಗ–ಪ್ರತಿನಿದಿಸುವ ಸಂಘ ಸಮಾಪನೆಯಾದಾಗ.

**ಕಲಂ 19 ಎ : ಮಾಹಿತಿ ನೋಡಲು ಅವಕಾಶ :** ಸದಸ್ಯನು ತನಗೆ ಸಂಬಂಧಪಟ್ಟ ಲೆಕ್ಕ ಪತ್ರಗಳನ್ನು ನೋಡಲು ಮತ್ತು ಬರೆದುಕೊಳ್ಳಲು ಅವಕಾಶ.

- 19 (ಎ) : ಸದಸ್ಯರಿಗೆ ಮಾಹಿತಿ ನೀಡಬೇಕು.
- ಕಲಂ 20 : ಮೂರು ಮಹಾಸಭೆಗಳಿಗೆ ಗೈರು ಹಾಜರು ಹಾಗೂ 3 ನಿರಂತರ ವರ್ಷಗಳವರೆಗೆ ಸಂಘದ ಸೇವೆಗಳನ್ನು ಪಡೆಯಲು ವಿಫಲವಾದರೆ 3 ವರ್ಷಗಳವರೆಗೆ ಮತದಾನದ ಹಕ್ಕು ಇರುವುದಿಲ್ಲ. ಕೃಷಿ ಸಾಲದ ವಸೂಲಾತಿ ಪ್ರಮಾಣ ಶೇ.75 ರಿಂದ 50ಕ್ಕೆ

**ಕಲಂ–20(2)** : ವಾರ್ಷಿಕ ಸಭೆಯ ಅಥವಾ ಚುನಾವಣೆಯ ದಿನಾಂಕಕ್ಕೆ ಮುಂಚಿತವಾಗಿ 12 ತಿಂಗಳ ಒಳಗೆ ಸದಸ್ಯನಾದ ವ್ಯಕ್ತಿ ಸಹಕಾರ ಸಂಘದ ಸಾಮಾನ್ಯ ಸಭೆ ಅಥವಾ ಮಂಡಲಿ ಸದಸ್ಯರ ಚುನಾವಣೆಯಲ್ಲಿ ಮತದಾನ ಮಾಡಲು ಹಕ್ಕಿರುವುದಿಲ್ಲ.

- 5 ಸಾಮಾನ್ಯ ಸಭೆಗಳ ಪೈಕಿ 3 ಸಾಮಾನ್ಯ ಸಭೆಗಳಿಗೆ ತಪ್ಪುವ ಸದಸ್ಯ, ಡೆಲಿಗೇಟ್, ಪ್ರತಿನಿಧಿ ಮತ್ತು
- 3 ನಿರಂತರ ಸಹಕಾರ ವರ್ಷಗಳವರೆಗೆ ಪ್ರತಿ ವರ್ಷ ಸದಸ್ಯನು ಸಂಘದ ಕನಿಷ್ಠ ಸೇವೆಗಳನ್ನುಬಳಸಿಕೊಳ್ಳಲು ತಪ್ಪಿದರೆ 3 ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಅಥವಾ ಆಡಳಿತ ಮಂಡಳಿ ಚುನಾವಣೆಯಲ್ಲಿ ಮತದಾನದ ಹಕ್ಕು ಇರುವುದಿಲ್ಲ. ಇತರೆ ಸಹಕಾರ ಸಂಘಕ್ಕೆ ಕಳಿಸಿದ ಪ್ರತಿನಿಧಿಯನ್ನು ಸದರಿ ಸಂಘದ ಆಡಳಿತ ಮಂಡಳಿಯ 2/3 ರಷ್ಟು ಬಹುಮತದಿಂದ ಬದಲಾವಣೆ ಮಾಡಬೇಕು. ಒಂದು ಸಂಘದ ನಿರ್ದೇಶಕನನ್ನು, ಎರಡು ಸಂಘಗಳಿಗೆ ಮಾತ್ರ ನಾಮನಿರ್ದೇಶನ ಮಾಡಬೇಕು.
- **ಕಲಂ 27 ಮಹಾಸಭೆ :** ಸೆಪ್ಟಂಬರ್ 25ರೊಳಗೆ. ತಪ್ಪಿದರೆ 5 ವರ್ಷಗಳ ಅನರ್ಹತೆ ಮಹಾಸಭೆಗೆ ಒಟ್ಟು 23 ಅಧಿಕಾರಗಳು
  - ನಿರ್ದೇಶಕರು ಸಂಘದ ಸೇವೆಗಳ ಬಳಕೆ ಬಗ್ಗೆ ವಿಮರ್ಶೆ
  - ಲೆಕ್ಕ ಪರಿಶೋಧಕರ ನೇಮಕ
  - ನೀತಿ ಸಂಹಿತೆಯ ರಚನೆ
- **27 (ಬಿ) :** ಸಹಕಾರ ವರ್ಷದ ಅಂತ್ಯದಿಂದ 6 ತಿಂಗಳ ಒಳಗೆ ನಿಬಂಧಕರಿಗೆ ವರದಿ ಸಲ್ಲಿಸುವುದು ಆಡಳಿತ ಮಂಡಳಿಯ ಜವಾಬ್ದಾರಿ.
- **ಕಲಂ 28(ಸಿ) :** ಆಡಳಿತ ಮಂಡಳಿ ಅಧಿಕಾರ ಮತ್ತು ಕರ್ತವ್ಯಗಳು: ಒಟ್ಟು 20 ವಿಷಯಗಳನ್ನು ಪ್ರಥಮ ಬಾರಿಗೆ ಕಾಯಿದೆಯಲ್ಲಿ ಅಳವಡಿಸಲಾಗಿದೆ.
- **ಕಲಂ 29 (ಎಫ್) :** ಪದಾಧಿಕಾರಿಗಳ ಅವಧಿ: ಚುನಾವಣಾ ದಿನಾಂಕದಿಂದ 5 ವರ್ಷ
- **ಕಲಂ 29(ಜಿ) :** ಮುಖ್ಯ ಕಾರ್ಯನಿರ್ವಾಹಕನಿಗೆ ಪದಾಧಿಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕಿಲ್ಲ.

**ಕಲಂ 26(4) ಮಹಾಸಭೆ**

1. ಉಪವಿಧಿ ತಿದ್ದುಪಡಿ ನಂತರ ನಿಬಂಧಕರಿಗೆ ಒಪ್ಪಿಗೆಗೆ

ಕಳುಹಿಸುವುದು.

2. ವಾರ್ಷಿಕ ಮಹಾಸಭೆ ನಿಗದಿಪಡಿಸಿದ ಅವಧಿಯೊಳಗೆ ಮಾಡಲು ತಪ್ಪಿದರೆ.
3. ಲೆಕ್ಕಪರಿಶೋಧನಾ ವರದಿಯನ್ನು ಮಹಾಸಭೆಗೆ ಮಂಡಿಸದಿದ್ದರೆ. ನಿಬಂಧಕರು ನಿರ್ದೇಶಕರನ್ನು ತೆಗೆದುಹಾಕತಕ್ಕದ್ದು – 5 ವರ್ಷ ಮರು ಆಯ್ಕೆ, ಮುಂದುವರೆಸಿ, ಪುನರ್ ಆಯ್ಕೆ ಅರ್ಹರಿರತಕ್ಕದ್ದಲ್ಲ. ನೋಟೀಸ್ ಜಾರಿ ಮಾಡಿದ ನಂತರ ಕ್ರಮ ವಹಿಸುವುದು.

**ಕಲಂ 27ಎ ಮತದಾನದ ಹಕ್ಕು**

1. ಹಿಂದಿನ 5 ವರ್ಷಗಳ ಮಹಾಸಭೆಯಲ್ಲಿ 3 ರಲ್ಲಾದರೂ ಹಾಜರಿರತಕ್ಕದ್ದು
2. ಕನಿಷ್ಠ ಸೇವೆಗಳು, ಸೌಲಭ್ಯಗಳ ಬಳಕೆ. ಇಲ್ಲವಾದರೆ □ ಮೂರು ವರ್ಷ ಮತದಾನದ ಹಕ್ಕು ಇರತಕ್ಕದ್ದಲ್ಲ.

ಮಹಾಸಭೆಯ ಕೋರಂ: ಒಟ್ಟು ಮತದಾನದ ಹಕ್ಕುಳ್ಳ ಸದಸ್ಯರ ಶೇ. 10 ಅಥವಾ 1000 ಯಾವುದು ಕಡಿಮೆಯೋ ಆ ಸಂಖ್ಯೆ ಕೋರಂ ಬಗ್ಗೆ ಸಿ.ಇ.ಒ. ದೃಢೀಕರಿಸಬೇಕು. ಸಹಾಯ ಪಡೆದ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಸರ್ಕಾರದ ನಾಮಿನಿ

ಕಲಂ 27ಬಿ ನಿಬಂಧಕರಿಗೆ ಮಾಹಿತಿ ಸಲ್ಲಿಕೆ – ಸೆಪ್ಟೆಂಬರ್ 30ರೊಳಗೆ ಸಲ್ಲಿಸತಕ್ಕದ್ದು.

1. ವಾರ್ಷಿಕ ವರದಿ.
2. ಲೆಕ್ಕಪತ್ರಗಳ ವಿವರ ಪಟ್ಟಿ
3. ಮಹಾಸಭೆ ಹೆಚ್ಚುವರಿ ವೆಚ್ಚ ಅನುಮೋದನೆ
4. ಉಪನಿಯಮಗಳ ತಿದ್ದುಪಡಿ ವಿವರ.
5. ಮಹಾಸಭೆ ನಡೆಸಿದ ದಿನಾಂಕ ಮತ್ತು ಚುನಾವಣೆ ಇದ್ದಲ್ಲಿ ಸಂಘದ ಬೈಲಾ ಜೊತೆ ಚುನಾವಣಾ ಆಯೋಗಕ್ಕೆ ತಿಳಿಸುವ ನಿರ್ಣಯ.
6. ಹಣ ದುರುಪಯೋಗಕ್ಕೆ ಸಿವಿಲ್ ಕ್ರಿಮಿನಲ್ ಹಾಗೂ ಶಿಸ್ತುಕ್ರಮ.
7. ನಿಬಂಧಕರು ಬಯಸಿದರೆ ಇನ್ನಿತರ ಮಾಹಿತಿ.

ಕಲಂ 28ಎ ಆಡಳಿತ ಮಂಡಳಿ ರಚನೆ ಮತ್ತು ಚುನಾವಣೆ ಪದಾಧಿಕಾರಿಗಳ ಮತ್ತು ಆಡಳಿತ ಮಂಡಳಿಯ ಅವಧಿ ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಿರತಕ್ಕದ್ದು.

ಪ್ರಾಥಮಿಕ ಮತ್ತು ಮಾಧ್ಯಮಿಕ ಸಹಕಾರ ಸಂಘಗಳ ಆಡಳಿತ ಮಂಡಳಿ

| | | |
|---|---|---|
| 1. | ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿ ಇದ್ದರೆ | – 11 13 |
| 2. | ತಾಲ್ಲೂಕು ವ್ಯಾಪ್ತಿ ಇದ್ದರೆ | – 13 15 |
| 3. | ತಾಲ್ಲೂಕು ಮತ್ತು ಜಿಲ್ಲೆಗೆ ಮೀರದ ಪರಂತು | – 15 17 |
| | ಪರಂತು ಪಟ್ಟಣ ಬ್ಯಾಂಕುಗಳು ಜಿಲ್ಲೆಗಿಂತ ಕಡಿಮೆ ವ್ಯಾಪ್ತಿ ಇದ್ದರೆ | – 17 |
| 4. | ಜಿಲ್ಲೆಗಿಂತ ಹೆಚ್ಚು ವ್ಯಾಪ್ತಿ ಇದ್ದರೆ | – 17 |
| 5. | ರಾಜ್ಯ | – 21 |

**ಮೀಸಲಾತಿ :** ಮಹಿಳೆ –2, ಪರಿಶಿಷ್ಟ ಜಾತಿ / ಪಂಗಡ–2, ಹಿಂದುಳಿದ ವರ್ಗ–2, ತಾಂತ್ರಿಕ ನಿರ್ದೇಶಕರು–2 ಕ್ಕೆ ಮೀರದಂತೆ ಸಂಘದ ಧ್ಯೇಯೋದ್ದೇಶಗಳಿಗನುಗುಣವಾಗಿ ಆಡಳಿತ, ಹಣಕಾಸು, ಕಾನೂನು ಪರಿಣಿತರು.

1. ಮತದಾನದ ಹಕ್ಕಿಲ್ಲ.
2. ಪದಾಧಿಕಾರಿಯಾಗತಕ್ಕದ್ದಲ್ಲ.
3. ಕೋರಂಗೆ ಸೇರತಕ್ಕದ್ದಲ್ಲ.

**ಕಲಂ 28ಬಿ : ಹೊಸ ಆಡಳಿತ ಮಂಡಳಿ ರಚನೆ :** ಆಡಳಿತ ಮಂಡಳಿ ರಚನೆಗೆ ಸೂಕ್ತ ಕ್ರಮ ಜರುಗಿಸಿ, ಹಾಲಿ ಆಡಳಿತ ಮಂಡಳಿ ಅವಧಿ ಮುಗಿಯುವ ಮೊದಲೇ ಚುನಾವಣೆಗೆ ಕ್ರಮ ಜರುಗಿಸತಕ್ಕದ್ದು.

**ಕಲಂ 28ಸಿ :** ಆಡಳಿತ ಮಂಡಳಿಯ ಕರ್ತವ್ಯ ಮತ್ತು ಅಧಿಕಾರಗಳು – ಹೆಚ್ಚುವರಿ ಸೇರ್ಪಡೆ.

1. ಸದಸ್ಯರ ಸೇರ್ಪಡೆ.
2. ಷೇರು ವಿಂಗಡಣೆ.
3. ಸಂಪನ್ಮೂಲ ಕ್ರೋಢೀಕರಣ ಮತ್ತು ಹೂಡಿಕೆ.
4. ಸೇವೆಗಳು ಮತ್ತು ಸಾಲಗಳು ಅಥವಾ ಮುಂಗಡಗಳ ಹಾಜರಾತಿ – ಭದ್ರತೆ ಪಡೆಯುವುದು.
5. ಸಭಾಧ್ಯಕ್ಷರು ಮತ್ತು ಪದಾಧಿಕಾರಿಗಳ ಆಯ್ಕೆ.
6. ಚರ ಮತ್ತು ಸ್ಥಿರಾಸ್ತಿ ಖರೀದಿ ಮಾರಾಟ.
7. ನೌಕರರ ಸಂಖ್ಯೆ, ವೇತನ ಮತ್ತು ಭತ್ಯೆಗಳು, ವಿದ್ಯಾರ್ಹತೆ ನಿಗದಿಪಡಿಸುವುದು.
8. ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಮತ್ತಿತರ ನೌಕರರ ನೇಮಕ.
9. ನೌಕರರ ಸೇವಾ ನಿಯಮ, ಶಿಸ್ತು ನಿಯಮ, ವಿಚಾರಣೆ, ದಂಡಗಳು ಬಗ್ಗೆ.
10. ಸಂಘದ ಧ್ಯೇಯೋದ್ದೇಶಗಳ ಗುರಿ ನಿಗದಿಪಡಿಸುವುದು.
11. ಖರ್ಚು ವೆಚ್ಚಗಳ ಮಿತಿ ನಿಗದಿಪಡಿಸುವುದು.
12. ಲೆಕ್ಕಪತ್ರಗಳ ತಪಾಸಣೆ ಮಾಹಿತಿ, ವರದಿ ಪಡೆಯುವುದು.
13. ಲೆಕ್ಕ ತಪಾಸಣಾ ವರದಿ ಮೇಲೆ ಕ್ರಮ. ಅನುಸರಣಾ ವರದಿ ತಯಾರಿಸಿ ಮಹಾಸಭೆ ಒಪ್ಪಿಗೆ ಪಡೆಯುವುದು.
14. ವಾರ್ಷಿಕ ವರದಿ, ಆರ್ಥಿಕ ತಃಖ್ತೆಗಳು ಮತ್ತು ವಾರ್ಷಿಕ ಯೋಜನೆ ತಯಾರಿಸಿ, ಆಯವ್ಯಯದ ಬಗ್ಗೆ ಮಹಾಸಭೆ ಒಪ್ಪಿಗೆ.
15. ಸಂಘದ ಪರ ಮತ್ತು ವಿರುದ್ಧ ದಾಖಲಾದ ಪ್ರಕರಣಗಳನ್ನು ಪ್ರತಿನಿಧಿಸುವುದು.
16. ಹಣ ದುರುಪಯೋಗ ಪ್ರಕರಣಗಳಲ್ಲಿ ಸಿವಿಲ್, ಕ್ರಿಮಿನಲ್ ಮತ್ತು ಶಿಸ್ತುಕ್ರಮ ಜರುಗಿಸುವುದು.
17. ವಾರ್ಷಿಕ ಸಾಮಾನ್ಯ ಸಭೆ, ವಿಶೇಷ ಸರ್ವ ಸದಸ್ಯರ ಸಭೆ ಮತ್ತು ಬೇಡಿಕೆಗಳಿಗೆ ಸಭೆ ಕರೆಯುವುದು.
18. ಸಂಘದ ಬೆಳವಣಿಗೆಗನುಗುಣವಾಗಿ ನಿಯಮಗಳನ್ನು ರೂಪಿಸುವುದು.
19. ಇನ್ನಿತರ ಅವಶ್ಯಕ ಕ್ರಮ, ಸಂಗದ ಹಿತಾಸಕ್ತಿಯಿಂದ ಜರುಗಿಸುವುದು.

**ಕಲಂ–28(ಡಿ) :** ಸಂಘದ ಸದಸ್ಯರು, ನಿರ್ದೇಶಕರು, ಪದಾಧಿಕಾರಿಗಳು & ನೌಕರರ ವಿದೇಶ ಪ್ರವಾಸಕ್ಕೆ ಸರ್ಕಾರದ ಅನುಮತಿ ಕಡ್ಡಾಯ ನಿರ್ದೇಶಕರ ರಾಜೀನಾಮೆಯ ಅಂಗೀಕಾರಕ್ಕೆ ಅನ್ವಯವಾಗುವ ನಿಯಮವೇ ಪದಾಧಿಕಾರಿಗಳ ರಾಜೀನಾಮೆಗೂ ಅನ್ವಯವಾಗುತ್ತದೆ ಆಡಳಿತ ಮಂಡಳಿಯಲ್ಲಿ ಖಾಲಿ ಬೀಳುವ ನಿರ್ದೇಶಕರ ಸ್ಥಾನವನ್ನು 3 ತಿಂಗಳ ಒಳಗೆ ಭರ್ತಿ ಮಾಡದಿದ್ದರೆ ನಿಬಂಧಕರು ನಾಮ ನಿರ್ದೇಶನದ ಮೂಲಕ ಭರ್ತಿ ಮಾಡುತ್ತಾರೆ.... **ಮುಂದುವರೆಯುತ್ತದೆ.**

# ಪತ್ತಿನ ಸಹಕಾರ ಸಂಘಗಳು - ಜನ ಸಾಮಾನ್ಯರ ಕಲ್ಪವೃಕ್ಷಗಳು



▸▸ ಎನ್.ಆರ್.ಪಾಟೀಲ, ಹಿಂಡಲಗಾ, ಬೆಳಗಾವಿ ಜಿಲ್ಲೆ

**ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಕುರಿತು ಒಂದಿಷ್ಟು ಹೇಳಲೇಬೇಕು. ಕೃಷಿ ನಮ್ಮ ದೇಶದ ಬೆನ್ನೆಲುಬು. ಇಡೀ ದೇಶಕ್ಕೆ ಅನ್ನ ಹಾಕುವ ಅನ್ನದಾತನ ಕಷ್ಟಗಳು ಒಂದೋ ಎರಡೋ ಹೇಳತೀರದು. ಕೃಷಿಕನ ಅವಶ್ಯಕತೆಗಳನ್ನು ಪೂರೈಸಲೆಂದೇ ರಾಜ್ಯಾದ್ಯಂತ ಕೃಷಿ ಪತ್ತಿನ ಸಹಕಾರಿ ಸಂಘಗಳು ಅಸ್ತಿತ್ವಕ್ಕೆ ಬಂದಿವೆ. ಅವು ಕೃಷಿ ಕ್ಷೇತ್ರಕ್ಕೆ ಸಕಲ ಸವಲತ್ತುಗಳನ್ನು ನೀಡುತ್ತಲಿವೆ. ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ರೈತರಿಗೆ ನೀಡುವುದರ ಮೂಲಕ ಅವು ಕೃಷಿ ಕ್ಷೇತ್ರಕ್ಕೆ ವರದಾನಗಳಾಗಿವೆ. ಆದರೆ, ಇವು ಕೃಷಿಯೇತರರಿಗೆ ಸಹಾಯ ಮಾಡುವುದಿಲ್ಲ. ಈ ಕೃಷಿಯೆತರರರನ್ನು ದೃಷ್ಟಿಯಲ್ಲಿಟ್ಟುಕೊಂಡೇ ಅಸ್ತಿತ್ವಕ್ಕೆ ಬಂದವುಗಳು ಈ ಪತ್ತಿನ ಸಹಕಾರಿ ಸಂಘಗಳು. ಇಂದು ರಾಜ್ಯದಲ್ಲಿ 4505 ಪತ್ತಿನ ಸಹಕಾರಿ ಸಂಘಗಳು ನೊಂದಾವಣೆಗೊಂಡಿದ್ದು, ಅವುಗಳಲ್ಲಿ 3994 ಸಂಘಗಳು ಕಾರ್ಯೋನ್ಮುಖವಾಗಿವೆ. ಇವು ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳು. ಇವು ಕೃಷಿಯನ್ನು ಹೊರತು ಪಡಿಸಿ ಬೇರೆ ಎಲ್ಲದಕ್ಕೂ ಹಣದ ಸಹಾಯ ಮಾಡುವಲ್ಲಿ ಗಮನಾರ್ಹ ಪಾತ್ರ ವಹಿಸುತ್ತ ಬರುತ್ತಲಿವೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು, ಗೃಹ ನಿರ್ಮಾಣ ಮತ್ತಿತರ ಬಳಕೆಗೆ ಸಾಲ ನೀಡುತ್ತವೆ.**

"ಪತ್ತಿನ ಸಹಕಾರ ಸಂಘಗಳು" ಜನಸಮಾನ್ಯರ ಕಾಮದೇನುಗಳು. ಬಡವರ ಬಂಧುಗಳು. ಶ್ರಮಜೀವಿಯ ಆಶಾಕಿರಣಗಳು. ಒಂದು ಕಾಲದಲ್ಲಿ ಬೈಸಿಕಲ್ ಓಡಿಸುತ್ತಿದ್ದ ಯುವಕನೊಬ್ಬ ಮೋಟಾರು ಸೈಕಲ್ ತೆಗೆದುಕೊಂಡು ಓಡಾಡುತ್ತಿದ್ದಾನೆ ಎಂದರೆ ಹಾಗೂ ಮಧ್ಯಮವರ್ಗದ ವ್ಯಕ್ತಿಯೊಬ್ಬ ಕಾರು ತೆಗೆದುಕೊಂಡಿದ್ದಾನೆ ಎಂದರ 'ಅದರ ಹಿಂದೆ ಪತ್ತಿನ ಸಹಕಾರ ಸಂಘಗಳ ಸಹಾಯ ಹಸ್ತ ಇದೇ ಎಂದೇ ಅರ್ಥ. ಹಿಂದೆ ಸಾಹುಕಾರರ ಬಡ್ಡಿ-ಚಕ್ರಬಡ್ಡಿಗಳ ಉರುಳಲ್ಲಿ ಸಿಕ್ಕು ಕಷ್ಟ ಪಡುತ್ತಿದ್ದ ಜನ ಸಾಮಾನ್ಯನೊಬ್ಬ ಇಂದು ನೆಮ್ಮದಿಯ ಬದುಕು ಬಾಳುತ್ತಿದ್ದಾನೆ ಎಂದರೆ ಅದಕ್ಕೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುತ್ತಿರುವ ಪತ್ತಿನ ಸಹಕಾರಿ ಸಂಘಗಳೇ ಕಾರಣ ಎಂದು ಹೇಳಲು ಖುಷಿ ಅನಿಸುತ್ತದೆ. ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಸಹಕಾರೀ ಸಂಘಗಳ ಕಾಯ್ದೆಯಡಿ ಜನಸಮಾನ್ಯರಿಗೆ ಸಾಲ ನೀಡಿ ಅವರ ಆಕಾಂಕ್ಷೆಗಳನ್ನು ಈಡೇರಿಸುವ ಪತ್ತಿನ ಸಹಕಾರ ಸಂಘಗಳು ನಿಜಾರ್ಥದಲ್ಲಿ ಕಾಮದೇನುಗಳೇ ಹೌದು. ಇಂದು ಪತ್ತಿನ ಸಹಕಾರಿ ಸಂಘಗಳು ಸಹಕಾರೀ ತತ್ವದಡಿ ಅತ್ಯಂತ ಶ್ಲಾಘನೀಯ ಕಾರ್ಯ ನಿರ್ವಹಿಸುತ್ತಿವೆ.

"ಪತ್ತು" ಎಂದರೆ ಸಾಲ ಎಂದರ್ಥ. ಸಾಲದ ಅವಶ್ಯಕತೆ ಇರುವ ಗ್ರಾಹಕರಿಗೆ ಸಾಲ ನೀಡುವ ಉದ್ದೇಶದಿಂದಲೇ ಪತ್ತಿನ ಸಹಕಾರಿ ಸಂಘಗಳು ಅಸ್ತಿತ್ವಕ್ಕೆ ಬಂದಿವೆ. ಅತ್ಯಂತ ಕಡಿಮೆ ಬಡ್ಡಿದರದಲ್ಲಿ ತನ್ನ ಗ್ರಾಹಕರಿಗೆ ಸಾಲ ನೀಡಿ ಅವರನ್ನು ಬಡ್ಡಿ ಚಕ್ರಬಡ್ಡಿಯ ಸಾವುಕಾರರಿಂದ ಗ್ರಾಹಕರನ್ನು ರಕ್ಷಿಸುವುದು ಪತ್ತಿನ ಸಹಕಾರ ಸಂಘಗಳ ಮೂಲ ಉದ್ದೇಶ. ಈ ಹಿನ್ನಲೆಯಲ್ಲಿ ಈ ಸಹಕಾರೀ ಸಂಘಗಳನ್ನು ಜನತಾ ಕಲ್ಯಾಣಕಾರಕ ಸಂಘಗಳು ಎಂದು ಕರೆಯಬಹುದು. ಯಾರಿಗೆ ಹಣದ ಅವಶ್ಯಕತೆ ಇದೆಯೋ ಅಂಥಹವರನ್ನು ಪತ್ತಿನ ಸಹಕಾರ ಸಂಘಗಳು ತಮ್ಮ ಸದಸ್ಯರನ್ನಗಿಸಿಕೊಂಡು ಅವರಿಗೆ ಹಣದ ಸಹಾಯ ಮಾಡುತ್ತವೆ. ಇದರಿಂದಾಗಿ ಹೆಚ್ಚಿನ ಬಡ್ಡಿಗೆ ಸಾಲ ನೀಡುವ ಹಣದಾಹಿ ಹಾಗೂ ಕಪಟಿ ಶ್ರೀಮಂತರ ಕಪಿ ಮುಷ್ಠಿಯಿಂದ ಇವರನ್ನು ರಕ್ಷಿಸಿದ ಕೀರ್ತಿ ಈ ಸಹಕಾರೀ ಪತ್ತಿನ ಸಂಘಗಳಿಗೆ ಸಲ್ಲುತ್ತದೆ. ಈ ಸಂಘಗಳು ತಮ್ಮ ಸದಸ್ಯರಿಂದ ಸಂಗ್ರಹಿಸಿದ ಬಂಡವಾಳ ಮತ್ತು ಠೇವಣಿಗಳಿಂದ ಸಾಲ ನೀಡುತ್ತವೆ. ಕೆಲವು ಸಂದರ್ಭಗಳಲ್ಲಿ ಬೇರೆ ಬ್ಯಾಂಕ್‌ಗಳಿಂದಲೂ ಸಾಲ ಪಡೆದು ತನ್ನ ಸದಸ್ಯರಿಗೆ ಸಾಲ ನೀಡುತ್ತವೆ. ಅಲ್ಲದೆ ಸಾಲದ ಮರುಪಾವತಿ ಸಾಲ ಪಡೆದ ಸದಸ್ಯರಿಗೆ ಅನುಕೂಲ ಆಗುವಂತೆ ಅನೇಕ ಸುಲಭ ಕಂತುಗಳ ಮೂಲಕ ಹಣ ಸಂದಾಯ ಮಾಡುವಂತೆ ಅವಕಾಶ ಕಲ್ಪಿಸುತ್ತಾರೆ. ಒಟ್ಟಾರೆಯಾಗಿ ಪತ್ತಿನ ಸಹಕಾರ ಸಂಘಗಳು ಜನಸಾಮಾನ್ಯರ ಪಾಲಿಗೆ ಕಲ್ಪವೃಕ್ಷಗಳೇ ಆಗಿವೆ ಎಂದರೆ ತಪ್ಪಾಗಲಿಕ್ಕಿಲ್ಲ.

ಪತ್ತಿನ ಸಹಕಾರ ಸಂಘಗಳು 1912ರ ಸಹಕಾರ ಸಂಘಗಳ ಕಾಯ್ದೆಯ ಅನ್ವಯ ಅಸ್ತಿತ್ವಕ್ಕೆ ಬಂದಿವೆ. ಈ ಸಂಘದ ಸ್ಥಾಪನೆಗೆ ಆರಂಭದಲ್ಲಿ ಕನಿಷ್ಟ 10 ಜನ ಸದಸ್ಯರ ಅವಶ್ಯಕತೆ ಇದೆ. ಈ ಪತ್ತಿನ ಸಹಕಾರಿ ಸಂಘವನ್ನು ಸಹಕಾರಿ ಸಂಘಗಳ ಕಾಯ್ದೆಯ ಪ್ರಕಾರ ನೊಂದಾಯಿಸಬೇಕು. ಇವು ಸ್ವಯಂ ಪ್ರೇರಿತ ಸಂಘಟನೆಗಳಾಗಿದ್ದು ಸಂಘದ ಸದಸ್ಯರು ಬೇಡ ಎನಿಸಿದಾಗ ಸಂಘದ ಸದಸ್ಯತ್ವವನ್ನು ತೊ-

ರೆಯ ಬಹುದು. ಸಂಘವು ಕಾಯ್ದೆ ಬದ್ಧವಾಗಿ ನೊಂದಾವಣೆ ಆಗುವುದು ಕಡ್ಡಾಯ ಆಗಿರುವುದರಿಂದ ಸದಸ್ಯರು ಅದನ್ನು ಬಿಟ್ಟು ಹೊರಗೆ ಹೋಗಲು ಮತ್ತು ಹೊಸಬರು ಸದಸ್ಯರಾಗಿ ಒಳಗೆ ಬರಲು ಸ್ವತಂತ್ರರಾಗಿರುತ್ತಾರೆ. ಆದರೆ ಸದಸ್ಯರ ಹೆಸರಿನಲ್ಲೆ ವ್ಯವಹಾರ ನಡೆಯುವುದರಿಂದ ಏನಾದರೂ ಅವ್ಯವಹಾರ ನಡೆದಾಗ ಆ ಸದಸ್ಯರ ಹೆಸರಿನಲ್ಲೇ ಮೊಕದ್ದಮೆ ಹೂಡಲಾಗುತ್ತದೆ. ಸಂಘದ ಆಡಳಿತಚುನಾಯಿತ ಪ್ರತಿನಿಧಿಗಳ ವ್ಯವಸ್ಥಾಪಕ ಮಂಡಳಿಯ ಕೈಯಲ್ಲಿರುತ್ತದೆ. "ಒಬ್ಬರಿಗಾಗಿ ಎಲ್ಲರೂ ಎಲ್ಲರಿಗಾಗಿ ಒಬ್ಬರು" ಎಂಬ ಸಹಕಾರ ಮತ್ತು ಪ್ರಜಾಪ್ರಭುತ್ವ ತತ್ವದಡಿ ಇವು ಕಾರ್ಯ ನಡೆಸುತ್ತವೆ. ಸಹಕಾರಿ ಸಂಘಗಳಲ್ಲಿ ಸದಸ್ಯರ ಹೊಣೆಗಾರಿಕೆ ನಿಯಮಿತ ಆಗಿರುತ್ತದೆ. ಅದು ಅವರು ಸಂಘ–ಕ್ಕೆ ನೀಡಿದ ಬಂಡವಾಳದ ಮೊತ್ತಕ್ಕೆ ಸೀಮಿತ ಆಗಿರುತ್ತದೆ. ಆದರೂ ಕೆಲ ಸಂದರ್ಭಗಳಲ್ಲಿ ಸದಸ್ಯರು ಅನಿಯಮಿತ ಭಾರ ಹೊರುವ ಪ್ರಸಂಗಗಳು ಬಂದಾಗ ಅದನ್ನು ನಿಬಾಯಿಸಲೇ ಬೇಕಾಗುತ್ತದೆ.

ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ನೀಡಿಕೆಯ ಮೂಲಕ ಠೇವಣಿ ಸಂಗ್ರಹವನ್ನು ಹೆಚ್ಚಿಸುವ ಪ್ರಕ್ರಿಯೆಗೆ ಎಚ್ಚು ಆದ್ಯತೆ ಇದೆ. ಈ ಪ್ರಕಿಯೆ ಎಲ್ಲ ಬ್ಯಾಂಕ್‌ಗಳಲ್ಲೂ ಪ್ರಧಾನ ಅಂಶವಾಗಿದೆ. ಅಂದರೆ, ಸಾಲ ಮಂಜೂರಾತಿ ಮತ್ತು ಹೂಡಿಕೆಗಳ ಮೂಲಕ ಠೇವಣಿಯನ್ನು ಹೆಚ್ಚಿಸಿ ಹಣದ ಸರಬರಾಜು ಹೆಚ್ಚಿಸುವುದು ಎಂದರ್ಥ. ಇದನ್ನೇ ಅನುಭವದ ಮಾತೊಂದು ಹೀಗೆ ಹೇಳುತ್ತದೆ – "ಸಾಲಗಳು ಠೇವಣಿಗಳನ್ನು ಸೃಷ್ಟಿಸಿದರೆ ಠೇವಣಿಗಳು ಸಾಲಗಳನ್ನು ಸೃಷ್ಟಿಸುತ್ತವೆ." ಈ ಹಿನ್ನೆಲೆಯಲ್ಲಿ ಬ್ಯಾಂಕುಗಳ ಠೇವಣಿಗಳ್ನು ಹೆಚ್ಚಿಸುವ ಕ್ರಿಯೆಯನ್ನು "ಪತ್ತು ನಿರ್ಮಾಣ" ಎನ್ನಬಹುದು. ಈ ಠೇವಣಿಗಳನ್ನು ಗ್ರಾಹಕರು ಯವಾಗ ಬೇಕಾದಾರೂ ತಕ್ಕೊಳ್ಳಬಹುದು.

ಇಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಕುರಿತು ಒಂದಿಷ್ಟು ಹೇಳಲೇಬೇಕು. ಕೃಷಿ ನಮ್ಮ ದೇಶದ ಬೆನ್ನೆಲುಬು. ಇಡೀ ದೇಶಕ್ಕೆ ಅನ್ನ ಹಾಕುವ ಅನ್ನದಾತನ ಕಷ್ಟಗಳು ಒಂದೋ ಎರಡೋ ಹೇಳತೀರದು. ಕೃಷಿಕನ ಅವಶ್ಯಕತೆಗಳನ್ನು ಪೂರೈಯಿಸಲೆಂದೇ ರಾಜ್ಯಾದ್ಯಂತ ಕೃಷಿ ಪತ್ತಿನ ಸಹಕಾರಿ ಸಂಘಗಳು ಅಸ್ತಿತ್ವಕ್ಕೆ ಬಂದಿವೆ. ಅವು ಕೃಷಿ ಕ್ಷೇತ್ರಕ್ಕೆ ಸಕಲ ಸವಲತ್ತುಗಳನ್ನು ನೀಡುತ್ತಲಿವೆ. ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ರೈತರಿಗೆ ನೀಡುವುದರ ಮೂಲಕ ಅವು ಕೃಷಿ ಕ್ಷೇತ್ರಕ್ಕೆ ವರದಾನಗಳಾಗಿವೆ. ಆದರೆ ಇವು ಕೃಷಿಯೇತರರಿಗೆ ಸಹಾಯ ಮಾಡುವುದಿಲ್ಲ. ಈ ಕೃಷಿಯೆತರರನ್ನು ದೃಷ್ಟಿಯಲ್ಲಿಟ್ಟುಕೊಂಡೇ ಅಸ್ತಿತ್ವಕ್ಕೆ ಬಂದವುಗಳು ಈ ಪತ್ತಿನ ಸಹಕಾರಿ ಸಂಘಗಳು. ಇಂದು ರಾಜ್ಯದಲ್ಲಿ 4505 ಪತ್ತಿನ ಸಹಕಾರಿ ಸಂಘಗಳು ನೊಂದಾವಣೆಗೊಂಡಿದ್ದು, ಅವುಗಳಲ್ಲಿ 3994 ಸಂಘಗಳು ಕಾರ್ಯೋನ್ಮುಖವಾಗಿವೆ. ಇವು ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳು. ಇವು ಕೃಷಿಯನ್ನು ಹೊರತು ಪಡಿಸಿ ಬೇರೆ



ಎಲ್ಲದಕ್ಕೂ ಹಣದ ಸಹಾಯ ಮಾಡುವಲ್ಲಿ ಗಮನಾರ್ಹ ಪಾತ್ರ ವಹಿಸುತ್ತ ಬರುತ್ತಲಿವೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು, ಗೃಹ ನಿರ್ಮಾಣ ಮತ್ತಿತರ ಬಳಕೆಗೆ ಸಾಲ ನೀಡುತ್ತವೆ.

ಪತ್ತಿನ ಸಹಕಾರ ಸಂಘಗಳ ಒಂದು ವಿಶೇಷ ಅಂದರೆ ಅವುಗಳೂ ಕೂಡ ಸಹಕಾರ ಸಂಘಗಳ ಕಾಯ್ದೆಯ ಅಡಿಯೇ ಅಸ್ತಿತ್ವಕ್ಕೆ ಬಂದಿದ್ದರೂ ಅವು ಸರಕಾರ ದಿಂದ ಹಣಕಾಸಿನ ನೆರವು ಪಡೆದಿರುವುದಿಲ್ಲ. ಇವು ಸ್ವ–ಯಂ ಅಭಿವೃದ್ಧಿ ಹೊಂದಿರುತ್ತವೆ. ಇವುಗಳಿಗೆ ಸಾಲ ತೆಗೆದುಕೊಳ್ಳಲು ಬಂದ ಸದಸ್ಯರೇ ಮೂಲ ನಿರ್ಮಾಪಕರು. ಎಲ್ಲ ಬ್ಯಾಂಕುಗಳಂತೆಯೇ ಪತ್ತಿನ ನಿರ್ಮಾಣ ಇಲ್ಲಿಯೂ ಅವಶ್ಯವಾಗಿರುತ್ತದೆ. ಪತ್ತಿನ ಹಣದ ನಿರ್ಮಾಣ ಎಂದರೆ ಸಾಲ ಹಣದ ನಿರ್ಮಾಣ ಎಂದರ್ಥ. ಸಾಲದ ಹಣದ ನಿರ್ಮಾಣ ಎಂದರೆ ಬ್ಯಾಂಕಿನ ಠೇವಣಿಗಳ ನಿರ್ಮಾಣ ಎಂದರ್ಥ. ಬ್ಯಾಂಕ್ ಆಗಲಿ ಪತ್ತಿನ ಸಹಕಾರೀ ಸಂಘಗಳಾಗಲಿ ತನ್ನ ಗ್ರಾಹಕರಿಗೆ ಸಾಲ ನೀಡಿದಾಗ ಇಂಥಹ ಪತ್ತಿನ ನಿರ್ಮಾಣ ಆಗುತ್ತದೆ. ಬ್ಯಾಂಕ್‌ಗಳಂತೆಯೇ ಪತ್ತಿನ ಸಹಕಾರ ಸಂಘಗಳು ಕೇವಲ ಹಣವನ್ನು ಸರಬರಾಜು ಮಾಡುವ ಸಂಸ್ಥೆಗಳಲ್ಲ, ಜೊತೆಗೆ ಅವು ಹಣವನನು ನಿರ್ಮಿಸುವ ಸಂಸ್ಥೆಗಳೂ ಹೌದು. ಪತ್ತಿನ ಸಹಕರಿ ಸಂಘಗಳು ಸಾಮಾನ್ಯವಾಗಿ ಬ್ಯಾಂಕ್ ವ್ಯವಸ್ಥೆಯಂತೆಯೇ ಗ್ರಾಹಕರಿಗೆ ಸಾಲ ನೀಡುತ್ತವೆ ಮತ್ತು ಠೇವಣಿ ಸಂಗ್ರಹಿಸುತ್ತವೆ. ಸಾಲ ನೀಡುವಾಗ ಸಾಲದ ಮೊತ್ತಕ್ಕೆ ಸರಿ ಆಗುವ ಭದ್ರತೆಗೆ ಬೇಕಾಗುವ ಕಾಗದ ಪತ್ರಗಳನ್ನು ಪಡೆದುಕೊಳ್ಳುತ್ತವೆ. ನಿಗದಿತ ಸಮಯದಲ್ಲಿ ನಿಗದಿತ ಹಣ ಸಂದಾಯ ಆಗದೇ ಇದ್ದರೆ ಸಾಲ ತೆಗೆದುಕೊಂಡ ಗ್ರಾಹಕನ ಮೇಲೆ ಮೊಕ್ಕದಮೆ ಹೂಡುವ ಅಧಿಕಾರ ಪತ್ತಿನ ಸಹಕಾರಿ ಸಂಘಗಳಿಗಿದೆ.

ಪ್ರಿಯ ಓದುಗ, ಪತ್ತಿನ ಸಹಕಾರ ಸಂಘಗಳು ಜನಸಾಮಾನ್ಯನ ಕೃಷಿಯೇತರ ಆರ್ಥಿಕ ಚಟುವಟಿಕೆಯ ಆಧಾರ ಸ್ತಂಭಗಳು. ಸಹಕಾರ ತತ್ವದಡಿ ಕಡಿಮೆ ಬಡ್ಡಿ ದರದಲ್ಲಿ ಜನಸಾಮಾನ್ಯರಿಗೆ ಸಾಲ ನೀಡಿ ಅವ ಬದುಕಿಗೆ ನೆಮ್ಮದಿ ನೀಡುತ್ತಿರುವ ಈ ಪತ್ತಿನ ಸಹಕಾರ ಸಂಘಗಳಿಗೆ ನನ್ನ ಹೃದಯಪೂರ್ವಕ ನಮನಗಳು.



# ಸಹಕಾರ ಸಂಘಗಳಲ್ಲಿ ಆಂತರಿಕ ನಿಯಂತ್ರಣ; ವ್ಯವಸ್ಥೆಯ ಮಹತ್ವ

▸▸ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು.

**ಆಂತರಿಕ ಲೆಕ್ಕ ನಿಯಂತ್ರಣ ವ್ಯವಸ್ಥೆಯಿಂದಾಗಿ ನಮ್ಮ ಮನೆಯನ್ನು ನಾವೇ ಶುಚಿಗೊಳಿಸಿ ಇಟ್ಟುಕೊಂಡಂತಾಗುತ್ತದೆ. ದುರುಪಯೋಗ ಪ್ರಕರಣಗಳನ್ನು ತಡೆಗಟ್ಟುವುದು ಸಾಧ್ಯವಾಗುತ್ತದೆ. ಕಾಯಿಲೆ ಬಂದ ನಂತರ ವಾಸಿ ಮಾಡುವ ಬದಲಿಗೆ ಕಾಯಿಲೆ ಬರದಂತೆ ತಡೆಗಟ್ಟುವುದು ಉತ್ತಮ ಕ್ರಮವಾಗುತ್ತದೆ. ಒಬ್ಬರು ನಿರ್ವಹಿಸಿದ ಕೆಲಸವನ್ನು ಮತ್ತೊಬ್ಬರು ಪರಿಶೀಲನೆ ಕೈಗೊಳ್ಳುವುದರಿಂದ ಅವರು ಮಾಡಿದ ತಪ್ಪುಗಳನ್ನು ಸರಿಪಡಿಸಬಹುದಾಗಿದೆ ಉದ್ದೇಶ ಪೂರ್ವಕವಲ್ಲದ ಆದರೆ ಕೈ ತಪ್ಪಿನಿಂದ (ನಜರ್ ಚೂಕ್) ಆದ ತಪ್ಪುಗಳು, ಆದಾಯ ಗಳಿಸುವಿಕೆಯಲ್ಲಿ ಕೈ ಬಿಟ್ಟಿರುವ ಸೋರಿಕೆಗಳು, ಲೆಕ್ಕಗಳಲ್ಲಿ ಆಗಿರುವ ತಪ್ಪುಗಳನ್ನು ಆಗಿಂದಾಗ್ಯೆ ಸರಿಪಡಿಸಿಕೊಳ್ಳಲು ಅವಕಾಶವಿರುತ್ತದೆ. ದಾಸ್ತಾನುಗಳ ಪರಿಶೀಲನೆ ಮೌಲ್ಯ ನಿರ್ಧರಿಸುವಿಕೆ ಆಸ್ತಿಗ'ಳ ಪರಿಶೀಲನೆ ಆಸ್ತಿಗಳಲ್ಲಿ ನಗದು, ಬ್ಯಾಂಕ್ ಶುಲ್ಕಗಳ ಪರಿಶೀಲನೆ ವಾಸ್ತವಿಕತೆ ಬಗ್ಗೆ ಖಚಿತಗೊಳಿಸಿಕೊಳ್ಳುವ ಹೂಡಿಕೆಗಳ ಬಗ್ಗೆ ನೈಜ ಪರಿಸ್ಥಿತಿ ವಿಶ್ಲೇಷಣೆ, ದೃಡೀಕರಿಸಿಕೊಳ್ಳುವುದು, ನೈಜತೆ ಬಗ್ಗೆ ಖಾತ್ರಿ ಗೊಳಿಸಿಕೊಳ್ಳುವುದು. ಸಾಲಗಳು ಮುಂಗಡಗಳಲ್ಲಿ ಖಾತೆವಾರು ಪರಿಶೀಲನೆ ಕೈಗೊಂಡು ಷೆಡ್ಯೂಲ್‌ಗಳನ್ನು ತಯಾರಿಸಿ ತಾಳೆ ಮಾಡಿಕೊಳ್ಳತಕ್ಕದ್ದು.**

ಸಹಕಾರ ಸಂಘಗಳು ಪ್ರಾಥಮಿಕವಾಗಿ ವ್ಯವಹಾರಿಕ ಸಂಸ್ಥೆಗಳು. ವ್ಯವಹಾರಗಳು ಪ್ರತಿಫಲನಗೊಳ್ಳುವುದು ತಾನು ನಿರ್ವಹಿಸುತ್ತಿರುವ ಲೆಕ್ಕಗಳ ಮುಖಾಂತರ. ಸದಸ್ಯರು ಸಂಘದೊಡನೆ ನಡೆಸಿದ ವ್ಯವಹಾರದ ಬಗ್ಗೆ ತಿಳಿದುಕೊಳ್ಳಲು ಮಾಹಿತಿ ಪಡೆಯಲು ಕ.ರಾ.ಸ.ಸಂಘಗಳ ಕಾಯ್ದೆ ರೀತಿ ತಮಗೆ ಹಕ್ಕು ಇರುತ್ತದೆ. ಸಂಘಗಳ ಲೆಕ್ಕಗಳ ತಪಾಸಣೆ ನಡೆಸುವುದು ಹಿಂದೆ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿತ್ತು. ಆದರೆ ಈಗ ಈ ಜವಾಬ್ದಾರಿ ಸಹಕಾರಿ ಸಂಘದ ಜವಾಬ್ದಾರಿಯಾಗಿರುತ್ತದೆ (ಕ. ರಾ.ಸ. ಕಾಯ್ದೆ ಕಲಂ 63). ಪ್ರತಿಯೊಂದು ಸಹಕಾರ ಸಂಘವು ಆರ್ಥಿಕ ವರ್ಷ ಮಾರ್ಚ್ 31, ಕಳೆದ ಒಂದು ತಿಂಗಳ ಒಳಗೆ ಲೆಕ್ಕಗಳನ್ನು ಅಂತಿಮಗೊಳಿಸಿ ಅಂತಿಮ ಲೆಕ್ಕಗಳನ್ನು (ಜಮಾ ಖರ್ಚು, ವ್ಯಾಪಾರ ತಖ್ತೆ, ಲಾಭ–ನಷ್ಟ ತಖ್ತೆ, ಆಸ್ತಿ ಜವಾಬ್ದಾರಿ ತಖ್ತೆ) ಗಳನ್ನು ತಾನು ಹಿಂದಿನ ಸೆಪ್ಟಂಬರ್ 25ರ ಒಳಗೆ ನಡೆಸಿದ ಸರ್ವಸದಸ್ಯರ ಸಭೆಯಲ್ಲಿ ನೇಮಕಾತಿ ಮಾಡಿಕೊಂಡ ಲೆಕ್ಕ ಪರಿಶೋಧಕರಿಗೆ ಸಲ್ಲಿಸತಕ್ಕದ್ದು. ಲೆಕ್ಕ ಪರಿಶೋಧನೆಗಾಗಿ ಚಾರ್ಟಡ್ ಅಕೌಂಟೆಂಟ್ / ಕಾಸ್ಟ್ ಅಕೌಂಟೆಂಟ್ / ಇಲಾಖಾ ಲೆಕ್ಕ ಪರಿಶೋಧಕರನ್ನಾಗಲಿ ನೇಮಿಸಿಕೊಳ್ಳಲು ನಿಯಮಗಳಲ್ಲಿ ಅವಕಾಶವಿದೆ. ಪ್ರತಿವರ್ಷ ಸೆಪ್ಟಂಬರ್ 1 ರ ಒಳಗೆ ಲೆಕ್ಕ ಪರಿಶೋಧನೆಯಾಗತಕ್ಕದ್ದು. ಲೆಕ್ಕ ಪರಿಶೋಧಕರಿಂದ ದೃಡೀಕೃತ ನಂತರ ಸಂಘದ ಅಂತಿಮ ಲೆಕ್ಕಗಳು ಸತ್ಯಸ್ವರೂಪದ್ದಾಗಿರುತ್ತದೆ ಎಂದು ಅರ್ಥೈಸಲಾಗುವುದು. ಆದರೆ, ಇತ್ತೀಚಿನ ದಿನಗಳಲ್ಲಿ ಲೆಕ್ಕ ಪರಿಶೋಧನೆ ನಂತರದಲ್ಲಿ ದುರುಪಯೋಗ ಪ್ರಕರಣಗಳು ಬೆಳಕಿಗೆ ಬರುತ್ತಿದ್ದು ಆತಂಕದ ಸ್ಥಿತಿಗೆ ಕಾರಣವಾಗುತ್ತಿದೆ. ಅಲ್ಲದೆ ಲೆಕ್ಕಗಳ ಮರು ಲೆಕ್ಕ ಪರಿಶೋಧನೆಗೆ / ಪರಿವೀಕ್ಷಣೆಗೆ / ವಿಚಾರಣೆಗೆ ಒಳಪಡಬೇಕಾಗಿ ಬಂದಿರುತ್ತದೆ.

ಈ ಪರಿಸ್ಥಿತಿ ಉದ್ಭವಿಸದಂತೆ ತಡೆಗಟ್ಟಲು ಸಂಘದ ನೈಜ ಆರ್ಥಿಕ ಪರಿಸ್ಥಿತಿ ಪ್ರತಿಬಿಂಬಿಸಲು ಅನುವಾಗುವಂತೆ ಸಂಘಗಳಲ್ಲಿ, ಬ್ಯಾಂಕುಗಳಲ್ಲಿ ಆಂತರಿಕ ಲೆಕ್ಕ ಪರಿಶೋಧನಾ ವ್ಯವಸ್ಥೆ ಜಾರಿಗೆ ತರುವುದು ಇಂದಿನ ಅತ್ಯಂತ ಅವಶ್ಯಕ ನೀತಿ.

97ನೇ ಸಂವಿಧಾನ ತಿದ್ದುಪಡಿ ಆಶಯ ಸಹಕಾರ ಸಂಘಗಳಲ್ಲಿ ಸದಸ್ಯರಿಂದ ಚುನಾಯಿತ ಆಡಳಿತ ಮಂಡಳಿ ಮೂಲಕ ಸದಸ್ಯರ ಆಶೋತ್ತರಗಳನ್ನು ಈಡೇರಿಸುವ ಹೊಣೆಗಾರಿಕೆ ಉಳ್ಳ ಆಡಳಿತ ಮಂಡಳಿ ಅಸ್ಥಿತ್ವದಲ್ಲಿರತಕ್ಕದ್ದು. ಸಹಕಾರ ಸಂಘಗಳು ಸದಸ್ಯ ಚಾಲಿತ ಸಹಕಾರ ಸಂಘಗಳಾಗಿ ಕರ್ತವ್ಯ ನಿರ್ವಹಿಸಬೇಕು. ಆಡಳಿತ ಮಂಡಳಿಗೆ ಕರ್ತವ್ಯ ನಿರ್ವಹಿಸಲು ಸ್ವಾತಂತ್ರ್ಯ ನೀಡಿರುವುದರ ಜೊತೆಗೆ ಜವಾಬ್ದಾರಿಯನ್ನು ನಿಗದಿ ಪಡಿಸದೆ (ಕಲಂ 28ಅ) ಕರ್ತವ್ಯ ಲೋಪಗಳಾದಲ್ಲಿ, ಸಂಘದಲ್ಲಿ

ಹಣ ದುರುಪಯೋಗಗಳಾದಲ್ಲಿ ಆಡಳಿತ ಮಂಡಳಿ ರದ್ದು ಪಡಿಸುವ, ಅಮಾನತ್ತಿನಲ್ಲಿಡುವ (ಕಲಂ 30) ಸದಸ್ಯರನ್ನು ಅನರ್ಹಗೊಳಿಸುವ (29ಅ) ಅವಕಾಶಗಳನ್ನು ಕಾಯ್ದೆಯಲ್ಲಿ ಕಲ್ಪಿಸಲಾಗಿದೆ. ಈ ಹಿನ್ನಲೆಯಲ್ಲಿ ಸಂಘದ ಸದಸ್ಯರು ಮತ್ತು ಇತರೆ ಭಾಗಿದಾರರಾದ (Stake holders) ಠೇವಣಿದಾರರು, ಸಾಲ ನೀಡಿದ ಸಂಸ್ಥೆಯವರು, ಸಂಘದೊಡನೆ ವ್ಯವಹರಿಸುತ್ತಿರುವ ಇತರೆ ಎಲ್ಲರ ವಿಶ್ವಾಸವನ್ನು ಗಳಿಸುವ ಉಳಿಸುವ ಸಂಘವನ್ನು ಬೆಳೆಸುವಲ್ಲಿ ಆಂತರಿಕ ನಿಯಂತ್ರಣಗಳ ವ್ಯವಸ್ಥೆ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

ಆಂತರಿಕ ಲೆಕ್ಕ ನಿಯಂತ್ರಣ ವ್ಯವಸ್ಥೆಯಿಂದಾಗಿ ನಮ್ಮ ಮನೆಯನ್ನು ನಾವೇ ಶುಚಿಗೊಳಿಸಿ ಇಟ್ಟುಕೊಂಡಂತಾಗುತ್ತದೆ. ದುರುಪಯೋಗ ಪ್ರಕರಣಗಳನ್ನು ತಡೆಗಟ್ಟುವುದು ಸಾಧ್ಯವಾಗುತ್ತದೆ. ಕಾಯಿಲೆ ಬಂದನಂತರ ವಾಸಿ ಮಾಡುವ ಬದಲಿಗೆ ಕಾಯಿಲೆ ಬರದಂತೆ ತಡೆಗಟ್ಟುವುದು ಉತ್ತಮ ಕ್ರಮವಾಗುತ್ತದೆ. ಒಬ್ಬರು ನಿರ್ವಹಿಸಿದ ಕೆಲಸವನ್ನು ಮತ್ತೊಬ್ಬರು ಪರಿಶೀಲನೆ ಕೈ ಗೊಳ್ಳುವುದರಿಂದ ಅವರು ಮಾಡಿದ ತಪ್ಪುಗಳನ್ನು ಸರಿಪಡಿಸಬಹುದಾಗಿದೆ ಉದ್ದೇಶ ಪೂರ್ವಕವಲ್ಲದ ಆದರೆ ಕೈ ತಪ್ಪಿನಿಂದ (ನಜರ್ ಚೂಕ್) ಆದ ತಪ್ಪುಗಳು, ಆದಾಯಗಳಿಸುವಿಕೆಯಲ್ಲಿ ಕೈ ಬಿಟ್ಟಿರುವ ಸೋರಿಕೆಗಳು, ಲೆಕ್ಕಗಳಲ್ಲಿ ಆಗಿರುವ ತಪ್ಪುಗಳನ್ನು ಆಗಿಂದಾಗ್ಯೆ ಸರಿಪಡಿಸಿಕೊಳ್ಳಲು ಅವಕಾಶವಿರುತ್ತದೆ. ದಾಸ್ತಾನುಗಳ ಪರಿಶೀಲನೆ ಮೌಲ್ಯ ನಿರ್ಧರಿಸುವಿಕೆ ಆಸ್ತಿಗಳ ಪರಿಶೀಲನೆ ಆಸ್ತಿಗಳಲ್ಲಿ ನಗದು, ಬ್ಯಾಂಕ್ ಶುಲ್ಕಗಳ ಪರಿಶೀಲನೆ ವಾಸ್ತವಿಕತೆ ಬಗ್ಗೆ ಖಚಿತಗೊಳಿಸಿಕೊಳ್ಳುವ ಹೂಡಿಕೆಗಳ ಬಗ್ಗೆ ನೈಜ ಪರಿಸ್ಥಿತಿ ವಿಶ್ಲೇಷಣೆ, ದೃಡೀಕರಿಸಿಕೊಳ್ಳುವುದು, ನೈಜತೆ ಬಗ್ಗೆ ಖಾತ್ರಿ ಗೊಳಿಸಿಕೊಳ್ಳುವುದು. ಸಾಲಗಳು ಮುಂಗಡಗಳಲ್ಲಿ ಖಾತೆವಾರು ಪರಿಶೀಲನೆ ಕೈಗೊಂಡು ಷಡ್ಯೂಲ್‌ಗಳನ್ನು ತಯಾರಿಸಿ ತಾಳೆ ಮಾಡಿಕೊಳ್ಳತಕ್ಕದ್ದು. ಅನೇಕ ಬಾರಿ ಅನೇಕ ನಷ್ಟದ, ದುರುಪಯೋಗದ ಮೊತ್ತಗಳು ವಿವಿದ ಗೌಪ್ಯ ರೀತಿಯ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹುದುಗಿರುತ್ತವೆ. ಇವುಗಳನ್ನು ಸರಿಪಡಿಸಿ ಸಂಘದ ನೈಜ ಆರ್ಥಿಕ ಸ್ಥಿತಿ ಪ್ರತಿಬಿಂಬಿಸುವ ಅಗತ್ಯತೆ ಇರುತ್ತದೆ. ಇದರಿಂದ ಆಡಳಿತ ಮಂಡಳಿಯು ಕ್ರಮಿಸಬೇಕಾದ ದಾರಿಯ ಬಗ್ಗೆ ಸ್ಪಷ್ಟ ಅರಿವು ಉಂಟಾಗಲು ಸಾಧ್ಯವಾಗುತ್ತದೆ. ಕನಿಷ್ಠ ಮಾಹೆಯಾನ ಸಂಘದ ಲಾಭಗಳಿಸುವಿಕೆ, ಆರ್ಥಿಕ ಸ್ಥಿತಿಗತಿ ಬಗ್ಗೆ ಹಿಮಾಹಿತಿ ದೊರೆತಲ್ಲಿ ಆಡಳಿತ ಮಂಡಳಿಯು ಅಗತ್ಯ ಸುಧಾರಣೆಗಳು, ಚಿಕಿತ್ಸಾ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಆಗಿಂದಾಗ್ಯೆ ತೆಗೆದುಕೊಳ್ಳುವ ನಿರ್ಧಾರಗಳು ಮತ್ತು ಅವುಗಳನ್ನು ಅನುಷ್ಠಾನ ಗೊಳಿಸುವುದರಿಂದ ಸಂಘದ ಕಾರ್ಯಾಚರಣೆಯನ್ನು ಸಕಾರಾತ್ಮಕ ಚಾಲನೆಗೆ ತರಬಹುದಾಗಿದೆ.

ಆಂತರಿಕ ನಿಯಂತ್ರಣ ವ್ಯವಸ್ಥೆಗಳನ್ನು ಕೈಗೊಳ್ಳುವಲ್ಲಿ ಈ ಕೆಳಕಂಡ ಕ್ರಮಗಳು ಅನುಕೂಲಕಾರಿಯಾಗಿರುತ್ತವೆ.

1. ಆಡಳಿತ ಮಂಡಳಿಯಲ್ಲಿ ಲೆಕ್ಕಗಳ ಬಗ್ಗೆ ಪರಿಣಿತರನ್ನು ವೃತ್ತಿಪರ ನಿರ್ದೇಶಕರನ್ನಾಗಿ ನಿಯಮಿಸಿ ಕೊಳ್ಳುವುದು
2. ಆಡಳಿತ ಮಂಡಳಿಯಿಂದ ಆಂತರಿಕ ಲೆಕ್ಕ ಪರಿಶೋಧಕರನ್ನ ನಿಯಮಿಸಿಕೊಳ್ಳುವುದು ಮತ್ತು ಚಾಲ್ತಿ ಲೆಕ್ಕ ಪರಿಶೋಧನೆ (Concurrent Audit) ಕ್ರಮ ಅನುಸರಿಸುವುದು / ಸಮಯವಾರು (Periodical) ಲೆಕ್ಕ ಪರಿಶೋಧನೆ ಕ್ರಮ ಅನುಸರಿಸುವುದು.
3. ಸಂಘ / ಬ್ಯಾಂಕ್‌ನಲ್ಲಿ ಪ್ರತ್ಯೇಕ ತಂಡಗಳನ್ನು ರಚಿಸಿ ತಂಡಗಳು ವಿಭಾಗ / ಶಾಖೆಗಳನ್ನು ಕಾಲಕಾಲಕ್ಕೆ ತಪಾಸಣೆ ಕೈಗೊಂಡು ಲೆಕ್ಕಗಳನ್ನು ಸರಿಪಡಿಸುವುದು.
4. ಶಾಖಾ / ವಿಭಾಗದಲ್ಲಿನ ನೌಕರರನ್ನು ಆಗಿಂದಾಗ್ಯೆ ಬದಲಾಯಿಸುತ್ತಾ ಇರುವುದು / ವರ್ಗಾವರಣೆ ಮಾಡುವುದು
5. ಪ್ರತಿ ನೌಕರರು ಸಿಬ್ಬಂದಿಗೆ ಕರ್ತವ್ಯ ಜವಾಬ್ದಾರಿಗಳನ್ನು ನಿಗದಿ ಪಡಿಸುವುದು (Job Chart)
6. ಸಿಬ್ಬಂದಿ ಸೇವಾ ಶಿಸ್ತು ನಿಯಮಾವಳಿಗಳನ್ನು ರಚಿಸಿ ಅನುಷ್ಠಾನಗೊಳಿಸುವುದು.
7. ಸೂಕ್ತ ಮೇಲ್ವಿಚಾರಣಾ ವ್ಯವಸ್ಥೆ ರೂಪಿಸುವುದು.
8. ಸಿಬ್ಬಂದಿ ವರ್ಗಾವಾರು ನಿಯಂತ್ರಣ ವ್ಯವಸ್ಥೆ ಇರತಕ್ಕದ್ದು ಸಿಬ್ಬಂದಿಯ ಕಾರ್ಯಚರಣಾ ವರದಿಗಳನ್ನು ಕಾಲಕಾಲಕ್ಕೆ ಪಡೆಯತಕ್ಕದ್ದು, ಪರಿಶೀಲಿಸತಕ್ಕದ್ದು.
9. ಕಂಪ್ಯೂಟರೀಕೃತ ವಾತಾವರಣದಲ್ಲಿ ಕಂಪ್ಯೂಟರಿ ಕರಣ ಲೆಕ್ಕಗಳ ನಿಖರತೆಗಳ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.
10. ಕಂಪ್ಯೂಟರಿಕರಣ ವಾತಾವರಣದಲ್ಲಿ ಲೆಕ್ಕಗಳ ನಿರ್ವಹಣೆಯಲ್ಲಿ ಜವಾಬ್ದಾರಿಗಳ ನಿಗದಿ ಪಡಿಸುವಿಕೆ ಯಾರೇ ಒಬ್ಬರು ಅಥವಾ ಇಬ್ಬರಿಗೆ ಮಾತ್ರ ನಿರ್ವಹಿಸಲು ಬಿಡದೆ ಮೇಲಾಧಿಕಾರಿಗಳ ಪರಿಶೀಲನೆ ನಂತರ ವ್ಯವಹಾರ ಅಧಿಕೃತಗೊಳ್ಳುವಂತೆ ನೋಡಿಕೊಳ್ಳತಕ್ಕದ್ದು.
11. ಆಂತರಿಕ ಲೆಕ್ಕ ಪರಿಶೋಧನ ವರದಿಗಳ ಬಗ್ಗೆ ಅನುಪಾಲನ ವರದಿಗಳನ್ನು ಪಡೆಯತಕ್ಕದ್ದು.
12. ಆಂತರಿಕ ಲೆಕ್ಕ ಪರಿಶೋಧನ ವರದಿಗಳಲ್ಲಿ ತಿಳಿಸಲ್ಪಟ್ಟ ಅಂಶಗಳ ಬಗ್ಗೆ ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಅತ್ಯಂತ ಪ್ರಾಶಸ್ತ್ಯವನ್ನು ನೀಡುವುದು.

ಆಂತರಿಕ ಲೆಕ್ಕ ತಪಾಸಣೆ, ಆಂತರಿಕ ನಿಯಂತ್ರಣಾ ವ್ಯವಸ್ಥೆಗಳು ಸಂಘದಲ್ಲಿ ಆಗಬಹುದಾದ ದುರಪಯೋಗ ಪ್ರಕರಣಗಳನ್ನು ತಡೆಗಟ್ಟುವುದಲ್ಲದೇ ಸಂಘವನ್ನು ಲಾಭದಾಯಕವಾಗಿ ನಡೆಸಲು, ಸಂಘದ ನೈಜ ಆರ್ಥಿಕಸ್ಥಿತಿ ತಿಳಿಯಲು ಸಹಕಾರಿಯಾಗುತ್ತದೆ.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳವಳಿಯ ಉಗಮ

**ಲೇಖನ : ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು**

... ಹಿಂದಿನ ಸಂಚಿಕೆಯಿಂದ

**ರಾಕ್‌ಡೇಲ್ ಪಯೋನಿಯರ್ಸ್ (Rochdale Poineers) :** ಕಾರ್ಖಾನೆ ಮಾಲೀಕರು ಹಾಗೂ ವ್ಯಾಪಾರಸ್ಥರಿಂದ ನಡೆಯುತ್ತಿದ್ದ ಶೋಷಣೆ ವಿರುದ್ದವಾಗಿ ಪ್ರಯತ್ನಗಳು ಅಲ್ಲಲ್ಲಿ ನಡೆದರೂ ಸಹ ಪರಿಸ್ಥಿತಿಯಲ್ಲಿ ಬದಲಾವಣೆಗಳಾಗಲಿಲ್ಲ, ನಿತ್ಯವೂ ಮುಷ್ಕರ, ಬೀಗ ಮುದ್ರೆಯಂತ ಘಟನೆಗಳು ನಡೆಯುತ್ತಿದ್ದವು. ರಾಬರ್ಟ್ ಓವೆನ್‌ರು ಪರಸ್ಪರ ಸಹಾಯ ತತ್ವ ಆಧಾರಿತವಾಗಿ ಸಹಕಾರಿ ಸಂಘಗಳನ್ನು ಸ್ಥಾಪಿಸಿ, ಆರ್ಥಿಕ ಸವಲತ್ತುಗಳನ್ನು ಪಡೆದುಕೊಂಡು ಶೋಷಣೆಯಿಂದ ಮುಕ್ತರಾಗಬೇಕೆಂದು ಕರೆ ನೀಡಿದರು, ಪ್ರಯೋಗಗಳನ್ನು ನಡೆಸಿದರು. ರಾಬರ್ಟ್ ಓವೆನ್‌ರಿಂದ ಪ್ರಭಾವಿತರಾದ ಅನೇಕರು ಸಹಕಾರಿ ಸ್ಟೋರ್‌ಗಳನ್ನು, ಸಂಘಗಳನ್ನು ಸ್ಥಾಪಿಸಿದರು. ಅವು ಯಶಸ್ವಿ ಯಾಗಲಿಲ್ಲ. 1843ರ ಒಂದು ದಿನ ರಾಕ್‌ಡೇಲ್ ಪಟ್ಟಣದ 28 ಜನ ನೇಕಾರರು ಚಾರ್ಟಿಸ್ಟ್ ಹಾಲ್ (Chartist Hall) ಎಂಬಲ್ಲಿ ಸೇರಿ ತಮಗೆ ಮಾಲೀಕರಿಂದ ಹಾಗೂ ವ್ಯಾಪಾರಸ್ಥರಿಂದ ಆಗುತ್ತಿದ್ದ ತೊಂದರೆಗಳು ಮತ್ತು ಪರಿಹಾರಗಳ ಬಗ್ಗೆ ಚರ್ಚಿಸಿದರು. ಇವರು ಬುದ್ಧಿವಂತರಾಗಿದ್ದರು. ಇವರ ಪೈಕಿ ಒಬ್ಬ ಕಾರ್ಖಾನೆ ಮಾಲೀಕರಿಂದ ಸಂಬಳ ಜಾಸ್ತಿ ಪಡೆಯುವುದು ಕಷ್ಟಸಾಧ್ಯ, ಆದರೆ ಸಾಮೂದಾಯಕವಾಗಿ ಗ್ರಾಹಕ ವಸ್ತುಗಳನ್ನು ಖರೀದಿಸುವುದರ ಮೂಲಕ ವೆಚ್ಚಗಳನ್ನು ತಗ್ಗಿಸಬಹುದೆಂದು ಸಲಹೆ ನೀಡಿದನು. ಆಗ ಮತ್ತೊಬ್ಬ ಹಿಂದೆ ಅಂತಹ ಸಹಕಾರ ಸ್ಟೋರ್‌ಗಳು ವಿಫಲವಾಗಿವೆ ಎಂದು ಹೇಳಿದನು. ಚರ್ಚೆಯನ್ನು ಮುಂದುವರೆಸಿದರು, ಹಿಂದೆ ಸ್ಥಾಪನೆಯಾಗಿ ವಿಫಲವಾಗಿದ್ದ ಸಹಕಾರ ಸ್ಟೋರ್‌ಗಳ ಬಗ್ಗೆ ವಿಮರ್ಶೆ ನಡೆಸಿದರು. ಸಾಲ ಆಧಾರಿತ ಮಾರಾಟ, ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಮಾರಾಟ, ಆಡಳಿತ ಮತ್ತು ವ್ಯವಹಾರದ ಸ್ಪಷ್ಟ ನಿಯಮಗಳ ಕೊರತೆ ಹಾಗೂ ಸದಸ್ಯರು ಸಂಘದಲ್ಲಿ ನಿಷ್ಠೆ ಹೊಂದದೆ ಇದ್ದುದ್ದರಿಂದ ವಿಫಲವಾಗಿರುವ ಕಾರಣಗಳ ಬಗ್ಗೆ ಪರಸ್ಪರ ಚರ್ಚಿಸಿ ಉದ್ಭವಿಸಿದ ಪ್ರಶ್ನೆಗಳು ಮತ್ತು ಸಂಶಯಗಳ ಬಗ್ಗೆ ಬಗೆಹರಿಸಿಕೊಂಡರು. ಸತತ ಚರ್ಚೆಯ ಬಳಿಕ ಗ್ರಾಹಕರ ಸಹಕಾರ ಸಂಘವನ್ನು ಸ್ಥಾಪಿಸುವುದೆಂದು, ನಗದು ವ್ಯಾಪಾರ ಮತ್ತು ಮಾರುಕಟ್ಟೆ ದರದಲ್ಲಿ ಮಾರಾಟ ಮಾಡುವುದೆಂದು ಹಾಗೂ ಸಂಘದಲ್ಲಿ ನಿಷ್ಠೆ ಹೊಂದಿರುವುದಾಗಿ ಯಾರು ಪ್ರಮಾಣ ಮಾಡುವರೋ ಅಂತವರನ್ನು ಸೇರಿಸಿಕೊಳ್ಳಬೇಕೆಂದು ತೀರ್ಮಾನಿಸಿದರು. ಕಂತು ರೂಪದಲ್ಲಿ ಷೇರುವಂತಿಕೆಯನ್ನು ಸಂಗ್ರಹಿಸಿದರು. ಒಂದು ವರ್ಷದ ಕಾಲ



ಉಳಿತಾಯ ಮಾಡಿ ತಲಾ ಒಂದು ಪೌಂಡ್‌ನಂತೆ ಒಟ್ಟು 28 ಪೌಂಡ್‌ಗಳ ದುಡಿಯುವ ಬಂಡವಾಳವನ್ನು ಸಂಗ್ರಹಿಸಿ 1844ರ ಆಗಸ್ಟ್ 15 ರಂದು "ದಿ ರಾಕ್‌ಡೇಲ್ ಇಕ್ವಿಟ್ಬಬಲ್ ಪಾಯೋನಿಯರ್ಸ್ ಸೊಸೈಟಿ" (The Rochdale Equitable Poineers Society) ಯನ್ನು ಸ್ಥಾಪಿಸಿದರು. ಈ 28 ಜನರ ಪೈಕಿ ಚಾರಲ್ಸ್ ಹೌರತ್ (Charles Howrath) ಮತ್ತು ಜೇಮ್ಸ್ ಡಾಲಿ (James Daly) ಈ ಇಬ್ಬರು ಸಂಘದ ಆಡಳಿತ ಮತ್ತು ವ್ಯವಹಾರ ಸಂಬಂಧಿತ ಸ್ಪಷ್ಟ ನಿಯಮಗಳನ್ನು ರೂಪಿಸಿದರು. ಉತ್ತಮ ನಾಯಕತ್ವ ಗುಣಗಳನ್ನು ಹೊಂದಿದ್ದ ಚಾರಲ್ಸ್ ಹೌರತ್‌ನನ್ನು ಆಧುನಿಕ ಸಹಕಾರ ಚಳುವಳಿಯ ಸಂವಿಧಾನ ಸೃಷ್ಟಿಕರ್ತ ಎಂದು ಕರೆಯಲಾಗುತ್ತದೆ. ಪ್ರಜಾಪ್ರಭುತ್ವ ವಿಧಾನದಲ್ಲಿ ಆಡಳಿತ ಸಮಿತಿಯನ್ನು ಹಾಗೂ ಅಧ್ಯಕ್ಷರು, ಖಜಾಂಚಿ, ಕಾರ್ಯದರ್ಶಿ, ಪಂಚಾಯ್ತುದಾರರು, ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಂಡರು. "ದಿ ಫ್ರೆಂಡ್ಲೀ ಸೊಸೈಟೀಸ್ ಆಕ್ಟ್ (The Friendly Societies Act) ಕಾಯಿದೆ ಅಡಿಯಲ್ಲಿ ನೊಂದಣಿ ಮಾಡಿಸಿದರು. ರಾಕ್‌ಡೇಲ್ ಪಟ್ಟಣದ ಟೋಡ್ ಲೇನ್ (Toad Lane) ಎಂಬ ರಸ್ತೆಯಲ್ಲಿ ವಾರ್ಷಿಕ ಬಾಡಿಗೆ 10 ಪೌಂಡ್‌ನಂತೆ ವ್ಯಾಪಾರ ಮಳಿಗೆಯನ್ನು ಪಡೆದರು. 1844ರ ಡಿಸೆಂಬರ್ 21 ರಂದು ಸಕ್ಕರೆ, ಬೆಣ್ಣೆ, ಓಟ್‌ಧಾನ್ಯ (Oatmeals), ಹಿಟ್ಟು (Flowr), ಮೇಣದ ಬತ್ತಿ ಈ ಐದು ಪದಾರ್ಥಗಳನ್ನು ಮಾರಾಟ ಮಾಡುವುದರ ಮೂಲಕ ಸಂಘವನ್ನು ಪ್ರಾರಂಭ ಮಾಡಿದರು. ನೆರೆಹೊರೆಯರು ಗೇಲಿ ಮಾಡಿದರೂ, ಉತ್ಸಾಹ ಕುಗ್ಗಲಿಲ್ಲ. ದಿನಕಳೆದಂತೆ ಸದಸ್ಯರ ಸಂಖ್ಯೆ ವ್ಯಾಪಾರ ವಹಿವಾಟು ಹೆಚ್ಚಾಯಿತು. ಜನರಲ್ಲಿ ವಿಶ್ವಾಸ ಮೂಡಿತು. ಸಂಘವು ಜನಪ್ರಿಯವಾಯಿತು.

ರಾಕ್‌ಡೇಲ್ ಸ್ಟೋರ್ ಪ್ರಥಮದ್ದಾಗಿರಲಿಲ್ಲ. ಇದಕ್ಕೆ ಮೊದಲು ಅನೇಕ ಗ್ರಾಹಕ ಸಹಕಾರ ಸಂಘಗಳು ಸ್ಥಾಪನೆಯಾಗಿ ವಿಫಲವಾಗಿದ್ದವು. ಆದರೆ

**ಜಗತ್ತಿನಲ್ಲಿ ಸಹಕಾರ ಪತ್ತಿನ/ಬ್ಯಾಂಕಿನ ಚಳವಳಿಯು ಜರ್ಮನಿಯಲ್ಲಿ ಜನ್ಮವೆತ್ತಿರುತ್ತದೆ. ಭಾರತದ ಸಹಕಾರ ಪದ್ಧತಿಯು ಜರ್ಮನಿಯ ಸಹಕಾರ ಪತ್ತಿನ ಚಳವಳಿಯಿಂದ ಪ್ರೇರಣೆಗೊಂಡಿರುತ್ತದೆ. 19ನೇ ಶತಮಾನದಲ್ಲಿ ಜರ್ಮನಿಯು ಆರ್ಥಿಕ ಮತ್ತು ಸಾಮಾಜಿಕ ತೊಂದರೆಗಳಿಂದ ಕೂಡಿತ್ತು. ಲೇವಾದೇವಿದಾರರಾಗಿದ್ದ ಯಹೂದಿಗಳು (Jews) ಕೃಷಿಕರನ್ನು ಮತ್ತು ಪಟ್ಟಣ ಪ್ರದೇಶದ ಕೆಲಸಗಾರರನ್ನು ದುಬಾರಿ ಬಡ್ಡಿ ವಿಧಿಸಿ ಶೋಷಣೆ ಮಾಡುತ್ತಿದ್ದರು. ಇಂತಹ ಒಂದು ಪರಿಸ್ಥಿತಿಯಲ್ಲಿ ಬಡವರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಯ ಸುಧಾರಣೆಗಾಗಿ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವುದರ ಮೂಲಕ ಸಹಕಾರ ಚಳುವಳಿಯು ಆರಂಭವಾಯಿತು.**

ರಾಕ್‌ಡೇಲ್ ಪಟ್ಟಣದ ಈ 28 ಜನ ನೇಕಾರರು ಜಗತ್ತಿನಲ್ಲೇ ಪ್ರಪ್ರಥಮ ಬಾರಿಗೆ ಕಾರ್ಯಸಾಧ್ಯ ಹಾಗೂ ಯಶಸ್ವಿ ಸಹಕಾರ ಸಂಘವನ್ನು ಸ್ಥಾಪಿಸಿದರು. ಆದುದ್ದರಿಂದಲೇ ಇವರನ್ನು ರಾಕ್‌ಡೇಲ್ ಪಾಯೋನಿಯರ್ಸ್ ಅಥವಾ ರಾಕ್‌ಡೇಲ್ ಅಗ್ರಗಾಮಿಗಳೆಂದು ಕರೆಯಲಾಗಿರುತ್ತದೆ. ಈ ಸಂಘದ ಯಶಸ್ಸು ಇಂಗ್ಲೆಂಡ್ ಮತ್ತು ಯುರೋಪ್‌ನಾದ್ಯಂತ ಹಾಗೂ ಪ್ರಪಂಚದ ಇತರೆ ದೇಶಗಳಿಗೂ ವ್ಯಾಪಿಸಿತು. ಈ ಸಂಘದ ಯಶಸ್ವಿನೊಡನೆ ಪ್ರಪಂಚದಲ್ಲಿ ಆಧುನಿಕ ಸಹಕಾರ ಚಳುವಳಿಯು ಆರಂಭವಾಯಿತು. ರಾಕ್‌ಡೇಲ್ ಅಗ್ರಗಾಮಿಗಳನ್ನು ಆಧುನಿಕ ಸಹಕಾರ ಚಳುವಳಿಯ ಸಂಸ್ಥಾಪಕರೆಂದು ಕರೆಯಲಾಗುತ್ತದೆ. ರಾಕ್‌ಡೇಲ್ ಅಗ್ರಗಾಮಿಗಳಲ್ಲಿ ಶ್ರದ್ಧೆ, ಶ್ರಮ, ಪ್ರಾಮಾಣಿಕತೆ, ಆದರ್ಶ ನಾಯಕತ್ವ, ಸಾಮಾಜಿಕ ಕಳಕಳಿ, ನೈತಿಕತೆ, ಪಾರದರ್ಶಕತೆ, ಹೊಣೆಗಾರಿಕೆ, ಇತ್ಯಾದಿ ಶ್ರೇಷ್ಠ ಗುಣಗಳಿದ್ದವು. ಆದುದರಿಂದಲೇ ಇವರು ಸಹಕಾರಿಗಳಿಗೆ ಸರ್ವಕಾಲಕ್ಕೂ ಆದರ್ಶ ಪುರುಷರಾಗಿದ್ದಾರೆ. ಇವರು ಸಂಘದ ಆಡಳಿತ ಮತ್ತು ವ್ಯವಹಾರಗಳನ್ನು ನಡೆಸಲು ರೂಪಿಸಿದ್ದ ನಿಯಮಗಳ ಪೈಕಿ ಕೆಲವು 'ರಾಕ್‌ಡೇಲ್ ತತ್ವಗಳು' ಎಂದು ಖ್ಯಾತಿಗಳಿಸಿವೆ. ಅವುಗಳೆಂದರೆ–

1) ಮುಕ್ತ ಸದಸ್ಯತ್ವ
2) ಒಬ್ಬ ಸದಸ್ಯನಿಗೆ ಒಂದು ಮತ–ಪ್ರಜಾಪ್ರಭುತ್ವ ವಿಧಾನ
3) ನಗದು ವ್ಯಾಪಾರ
4) ಶುದ್ಧ ಮತ್ತು ಕಲಬೆರೆಕೆ ರಹಿತ ಪದಾರ್ಥಗಳನ್ನು ಮಾರಾಟ ಮಾಡುವುದು
5) ಮಾರುಕಟ್ಟೆ ಬೆಲೆಯಲ್ಲಿ ಪದಾರ್ಥಗಳ ಮಾರಾಟ
6) ಷೇರು ಬಂಡವಾಳದ ಮೇಲೆ ಪರಿಮಿತವಾದ ಬಡ್ಡಿ
7) ಖರೀದಿಸಿದ ಪ್ರಮಾಣಕ್ಕೆ ಅನುಪಾತವಾಗಿ ಲಾಭಾಂಶ ವಿತರಣೆ
8) ಲಾಭದ ನಿರ್ದಿಷ್ಟ ಶೇಕಡ ಮೊಬಲಗನ್ನು ಸಹಕಾರ ಶಿಕ್ಷಣಕ್ಕಾಗಿ ಕಾಯ್ದಿರುಸುವುದು
9) ಧಾರ್ಮಿಕ ಮತ್ತು ರಾಜಕೀಯ ತಾಟಸ್ಥ್ಯ

ರಾಕ್‌ಡೇಲ್ ಅಗ್ರಗಾಮಿಗಳ ಕೇವಲ ಗ್ರಾಹಕ ಪದಾರ್ಥಗಳ ಚಟುವಟಿಕೆಗಳನ್ನಲ್ಲದೆ ಸದಸ್ಯರ ಸರ್ವತೋಮುಖ ಅಭಿವೃದ್ಧಿಯ ಧ್ಯೇಯೋದ್ದೇಶಗಳನ್ನು ಹೊಂದಿದ್ದರು. 1853ರ ವೇಳೆಗೆ ಲಾಭ ಗಳಿಸಿದ ಸಂಘವು ಜವಾಬ್ದಾರಿಗಳಿಗಿಂತ ಹೆಚ್ಚು ಆಸ್ತಿಯನ್ನು ಗಳಿಸಿತು. ಶಾಶ್ವತ ಯಶಸ್ವಿ ಮತ್ತು ಮಾದರಿ ಗ್ರಾಹಕರ ಸಹಕಾರ ಸಂಘವನ್ನು ಸ್ಥಾಪಿಸಿದ ಅಗ್ರಗಾಮಿಗಳು ತದನಂತರ ಉತ್ಪಾದನೆ, ಮಾರಾಟ, ಕಟ್ಟಡ ನಿರ್ಮಾಣ, ಇನ್ಸೂರೆನ್ಸ್ ಇತ್ಯಾದಿ ಸಂಘಗಳನ್ನು ಸ್ಥಾಪಿಸಿದರು. 1863ರಲ್ಲಿ ಸಗಟು ಮಾರಾಟ ಸಹಕಾರ ಸಂಘವನ್ನು (Cooperative Whole Sale Society) ಸ್ಥಾಪಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಇವರ ಯಶಸ್ವಿ "ಸಹಕಾರ ಆರ್ಥಿಕ ಪದ್ಧತಿಯು (Cooperative Economic System) ಸಾಧನೆಯ ಪ್ರಭಾವ ಮತ್ತು ಪರಿಣಾಮದಿಂದ ಇಂಗ್ಲೆಂಡ್‌ನಾದ್ಯಂತ ಹಾಗೂ ಜಗತ್ತಿನಾದ್ಯಂತ ವಿವಿಧ ಉದ್ದೇಶಿತ ಸಹಕಾರ ಸಂಘಗಳು ಸ್ಥಾಪನೆಯಾಗತೊಡಗಿದವು.

**ಕ್ರೈಸ್ತ ಸಮಾಜವಾದಿಗಳು (Christian Socialists) :** ಇದೊಂದು ಧಾರ್ಮಿಕ ಮನೋಭಾವನೆಯುಳ್ಳವರ ಸಂಸ್ಥೆ. ಇವರು ದೇಶದ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಯ ಉದ್ದೇಶಗಳನ್ನು ಹೊಂದಿದ್ದರು. ಇವರು ಬಡವರ ಶೋಷಣೆಯನ್ನು ವಿರೋಧಿಸಿದರು ಹಾಗೂ ಇಂತಹ ಶೋಷಣೆಯನ್ನು ಮಾಡಿ ಶ್ರೀಮಂತರಾಗುವುದು ಕ್ರೈಸ್ತ ಧರ್ಮಕ್ಕೆ ವಿರುದ್ಧವೆಂದು ಹೇಳಿದರು. ಆರ್ಥಿಕವಾಗಿ ಹಿಂದುಳಿದವರ ಪರಿಸ್ಥಿತಿಯ ಸುಧಾರಣೆಗಾಗಿ ಸ್ವ ಇಚ್ಛೆಯ ಸಂಘಟನೆಗಳನ್ನು ಸ್ಥಾಪಿಸಬೇಕೆಂದು ಕರೆ ನೀಡಿದರು ಹಾಗೂ ಈ ದಿಸೆಯಲ್ಲಿ ಟೈಲರ್ಸ್, ಪ್ರಿಂಟರ್ಸ್, ಬ್ಯಾಂಕರ್ಸ್, ಷೋಮೇಕರ್ಸ್ ಇತ್ಯಾದಿ ಕೆಲಸಗಾರರ ಸಂಘಗಳನ್ನು ಸ್ಥಾಪಿಸದರು. ಇವು ಸ್ವಲ್ಪ ಕಾಲ ನಡೆದರೂ ಕೂಡ ಯಶಸ್ವಿಯಾಗಲಿಲ್ಲ.

ಇಂಗ್ಲೆಂಡ್‌ನಲ್ಲಿ 1852ಕ್ಕೆ ಮೊದಲು ಸಹಕಾರ ಸಂಘಗಳಿಗಾಗಿ ಪ್ರತ್ಯೇಕ ಕಾಯಿದೆ ಇರಲಿಲ್ಲ. ಕೆಲವರು "ದಿ ಫ್ರೆಂಡ್ಲೀ ಸೊಸೈಟೀಸ್ ಆಕ್ಟ್" ಅಡಿಯಲ್ಲಿ ನೊಂದಾಯಿಸುತ್ತಿದ್ದರೆ ಇನ್ನು ಕೆಲವರು ನೊಂದಾಯಿಸುತ್ತಲೇ

ಇರಲಿಲ್ಲ. ಪ್ರತ್ಯೇಕ ಸಹಕಾರ ಕಾಯಿದೆಯು ಅಂಗೀಕಾರವಾಗುವ ದಿಸೆಯಲ್ಲಿ ಕ್ರೈಸ್ತ ಸಮಾಜವಾದಿಗಳು ಮಾಡಿದ ಪ್ರಯತ್ನವು ಸಹಕಾರ ಚಳುವಳಿಗೆ ಇವರು ನೀಡಿದ ಮಹತ್ವದ ಕೊಡುಗೆಯಾಗಿರುತ್ತದೆ. ಜಾನ್ ಮಾಕ್‌ಂ ಲೂಡ್‌ಲೌ (Jhon Malcolm Ludlow) ಸಹಕಾರದ ಬಿಲ್ಲನ್ನು ತಯಾರಿಸಿದರೆ ರಾಬರ್ಟ್ ಸ್ಲಾರೇ (Robert Slarey) ಸಂಸತ್ತಿನಲ್ಲಿ ಮಂಡಿಸಿದ್ದು, 1852ರಲ್ಲಿ ಸಹಕಾರ ಕಾಯ್ದೆ ಅಂಗೀಕರಾರವಾಗಿರುತ್ತದೆ. ಇದರ ಪ್ರಕಾರ ಅನಿಮಿಯತ ಜವಾಬ್ದಾರಿ ಹಾಗೂ ಪ್ರಾಥಮಿಕ ವ್ಯಾಪಾರ ಮತ್ತು ಕೆಲಸಗಾರರ ಸಂಘಗಳನ್ನು ಮಾತ್ರ ಸ್ಥಾಪಿಸಲು ಅವಕಾಶವಿರುತ್ತದೆ. 1862ರಲ್ಲಿ "ದಿ ಪ್ರಾವಿಡೆಂಟ್ ಅಂಡ್ ಇಂಡಸ್ಟ್ರೀಯಲ್ ಸೊಸೈಟೀಸ್ ಆಕ್ಟ್"ನ್ನು ಅಂಗೀಕರಿಸಲಾಯಿತು. ಇದರ ಪ್ರಕಾರ ಮಾಧ್ಯಮಿಕ ಮತ್ತು ಕೇಂದ್ರ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶವಾಯಿತು, ಜೊತೆಗೆ ನಿಯಮಿತ ಜವಾಬ್ದಾರಿಗೂ ಸಹ ಅವಕಾಶ ಮಾಡಿತು.

**ಸಗಟು ಸಹಕಾರ ಸಂಘಗಳು :** ಇಂಗ್ಲೆಂಡ್‌ನಲ್ಲಿ ರಾಕ್‌ಡೇಲ್ ಅಗ್ರಗಾಮಿಗಳ ಗ್ರಾಹಕ ಸಹಕಾರ ಸಂಘದ ಯಶಸ್ವಿನ ಪರಿಣಾಮವಾಗಿ ದೇಶದಾದ್ಯಂತ ಅನೇಕ ಪ್ರಾಥಮಿಕ ಗ್ರಾಹಕ ಸಹಕಾರ ಸಂಘಗಳು ಸ್ಥಾಪನೆಯಾದವು. ವ್ಯಕ್ತಿಗತ ಗ್ರಾಹಕರನ್ನು ಸದಸ್ಯರನ್ನಾಗಿ ಹೊಂದಿದ್ದ ಈ ಸಂಘಗಳು ಸಹಕಾರ ಚಿಲ್ಲರೆ ಅಂಗಡಿಗಳಾಗಿ ಕೆಲಸ ಮಾಡುತ್ತಿದ್ದವು. ಇವುಗಳು ತಮ್ಮ ಸ್ಟೋರ್‌ಗೆ ಬೇಕಾದ ಪದಾರ್ಥಗಳನ್ನು ಖರೀದಿಸಲು ಖಾಸಗಿ ಸಗಟು ಮಾರಾಟಗಾರರನ್ನು ಅವಲಂಭಿಸಿದ್ದವು. ಸಹಕಾರಿ ಅಂಗಡಿಗಳ ಬೆಳವಣಿಗೆಯನ್ನು ಕಂಡು ಖಾಸಗಿಯವರು ಸಹಿಸಿಕೊಳ್ಳಲಾಗದೆ ಪದಾರ್ಥಗಳ ಗುಣಮಟ್ಟ ಮತ್ತು ಬೆಲೆ ಇತ್ಯಾದಿ ವಿಷಯಗಳಲ್ಲಿ ತೊಂದರೆ ನೀಡಲಾರಂಭಿಸಿದರು.

ಇಂತಹ ಪರಿಸ್ಥಿತಿಯಲ್ಲಿ ಗ್ರಾಹಕ ಸಂಘಗಳು ಸೇರಿಕೊಂಡು ತಮ್ಮದೇ ಆದ ಸಗಟು ಸಹಕಾರ ಸಂಘವನ್ನು ಸ್ಥಾಪಿಲಸು ತೀರ್ಮಾನಿಸಿದವು. ಇದರ ಪರಿಣಾಮವಾಗಿ 1863ರಲ್ಲಿ ಮ್ಯಾನ್‌ಚೆಸರ್‌ನಲ್ಲಿ "ದಿ ನಾರ್ಥ್ ಆಫ್ ಇಂಗ್ಲೆಂಡ್ ಕೋ-ಅಪರೇಟಿವ್ ಹೋಲ್‌ಸೇಲ್ ಏಜೆನ್ಸಿ ಅಂಡ್ ಡಿಪೊ ಸೊಸೈಟಿ" ಯನ್ನು ಸ್ಥಾಪಿಸಿದವು.

ಇದು 1864ರಲ್ಲಿ ಕಾರ್ಯರಂಭ ಮಾಡಿತು. ಇದರ ಹೆಸರನ್ನು 1867ರಲ್ಲಿ ಕೋ-ಅಪರೇಟಿವ್ ಹೋಲ್ ಸೇಲ್ ಸೊಸೈಟಿ (Cooperative Whole Sale Society -CWS) ಎಂಬುದಾಗಿ ಮಾರ್ಪಡಿಸಲಾಯಿತು. ಇದು ಪ್ರಾಥಮಿಕ ಗ್ರಾಹಕ ಸಹಕಾರ ಸಂಘಗಳ ಮಹಾಮಂಡಳ ಸಂಸ್ಥೆಯಾಗಿ ಜಗತ್ತಿನಲ್ಲಿಯೇ ಅಗ್ರಗಣ್ಯ ಸಹಕಾರ ಸಗಟು ಸಂಸ್ಥೆಯಾಗಿ ಸಾಧನೆ ಮಾಡಿತು. ಇದರ ಸದಸ್ಯತ್ವವು ಎಲ್ಲಾ ಬಗೆಯ ಸಂಘಗಳಿಗೆ ಮಾತ್ರ ಸೀಮಿತವಾಗಿದ್ದು ವ್ಯಕ್ತಿಗತ ಸದಸ್ಯತ್ವಕ್ಕೆ ಅವಕಾಶ ಇರುವುದಿಲ್ಲ. ಕ್ರಮೇಣ ಇದು ಉತ್ಪದನಾ ಕ್ಷೇತ್ರಕ್ಕೂ ಪ್ರವೇಶಿಸಿ ಜಗತ್ತಿಗೆ ಮಾದರಿ ಸಹಕಾರ ಸಗಟು ವ್ಯಾಪಾರ ಸಂಸ್ಥೆಯಾಗಿ ಬೆಳೆಯಿತು. ಇದೇ ಉದ್ದೇಶಕ್ಕಾಗಿ ಸ್ಕಾಟ್‌ಲ್ಯಾಂಡ್‌ನ ಗ್ಲಾಸ್‌ಗೌ (Glasgow)ದಲ್ಲಿ ಸ್ಕಾಟ್‌ಲ್ಯಾಂಡ್ ಕೋ-ಅಪರೇಟಿವ್ ಹೋಲ್‌ಸೇಲ್ ಸೊಸೈಟಿಯನ್ನು 1868ರಲ್ಲಿ ಸ್ಥಾಪಿಸಲಾಯಿತು.

ಇಂಗ್ಲೆಂಡ್‌ನಲ್ಲಿ ಗ್ರಾಹಕ ಸಹಕಾರ ಸಂಘಗಳ ಸಾಧನೆಯು ಜಗತ್ತಿಗೇ ಮಾದರಿಯಾಗಿ ಬೆಳವಣಿಗೆ ಹೊಂದಿತು. ಕೃಷಿ ಮತ್ತಿತರ ಕ್ಷೇತ್ರಗಳಲ್ಲಿ ಸಂಘಗಳು ನಿಧಾನಗತಿಯಲ್ಲಿ ಪ್ರಾರಂಭವಾದವು. ಒಟ್ಟಾರೆ ಸಹಕಾರ ಚಳುವಳಿ ಹಿಂದೆಯೇ ಆರಂಭವಾಗಿದ್ದರೂ ಸಹ ರಾಕ್‌ಡೇಲ್ ಅಗ್ರಗಾಮಿಗಳ ಗ್ರಾಹಕರ ಸಹಕಾರ ಸಂಘದ ಯಶಸ್ಸಿನ ಮೂಲಕ ಆಧುನಿಕ ಸಹಕಾರ ಚಳವಳಿ ಆರಂಭವಾಯಿತು.

ಇಂಗ್ಲೆಂಡ್ ಆಧುನಿಕ ಸಹಕಾರ ಚಳುವಳಿಯ ತವರು. ಇದರ ಪ್ರಭಾವದಿಂದ ಯುರೋಪ್ ದೇಶಗಳಲ್ಲಿ ಉತ್ತಮ ಹಾಗೂ ಅನುಸರಣೆಯ ಪ್ರಗತಿಯಾಯಿತು. ಇದರ ಬಗ್ಗೆ ಕೆಲವು ದೇಶಗಳಲ್ಲಿನ ಚಳುವಳಿಯ ಆರಂಭದ ಬಗ್ಗೆ ಓದುಗರಿಗಾಗಿ ಮಾಹಿತಿ ನೀಡಲಾಗಿದೆ.

**ಜರ್ಮನಿಯಲ್ಲಿ ಸಹಕಾರ ಚಳವಳಿಯ ಆರಂಭ :** ಜಗತ್ತಿನಲ್ಲಿ ಸಹಕಾರ ಪತ್ತಿನ/ಬ್ಯಾಂಕಿನ ಚಳವಳಿಯು ಜರ್ಮನಿಯಲ್ಲಿ ಜನ್ಮವೆತ್ತಿರುತ್ತದೆ. ಬಾರತದ ಸಹಕಾರ ಪದ್ಧತಿಯು ಜರ್ಮನಿಯ ಸಹಕಾರ ಪತ್ತಿನ ಚಳವಳಿಯಿಂದ ಪ್ರೇರಣೆಗೊಂಡಿರುತ್ತದೆ. 19ನೇ ಶತಮಾನದಲ್ಲಿ ಜರ್ಮನಿಯು ಆರ್ಥಿಕ ಮತ್ತು ಸಾಮಾಜಿಕ ತೊಂದರೆಗಳಿಂದ ಕೂಡಿತ್ತು. ಲೇವಾದೇವಿದಾರರಾಗಿದ್ದ ಯಹೂದಿಗಳು (Jews) ಕೃಷಿಕರನ್ನು ಮತ್ತು ಪಟ್ಟಣ ಪ್ರದೇಶದ ಕೆಲಸಗಾರರನ್ನು ದುಬಾರಿ ಬಡ್ಡಿ ವಿಧಿಸಿ ಶೋಷಣೆ ಮಾಡುತ್ತಿದ್ದರು. ಇಂತಹ ಒಂದು ಪರಿಸ್ಥಿತಿಯಲ್ಲಿ ಬಡವರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಯ ಸುಧಾರಣೆಗಾಗಿ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವುದರ ಮೂಲಕ ಸಹಕಾರ ಚಳುವಳಿಯು ಆರಂಭವಾಯಿತು.

ಜರ್ಮನಿಯ ಈ ಸಹಕಾರ ಚಳುವಳಿಯ ಅಗ್ರಗಣ್ಯರು ಫ್ರೆಡ್ರಿಕ್ ವೆಲ್‌ಹೆಲ್ಮ್ ರೈಫಿಜಾನ್ (Fredrick Welhelm Raiffeisan) ಮತ್ತು ಹರ್‌ಮಾನ್ಸ್ ಷೂಲ್ಸ್ (Hermann Schulze) ಆಗಿರುತ್ತಾರೆ. ಇವರಿಬ್ಬರೂ ಒಂದೇ ಸಮಯದಲ್ಲಿ ಸಹಕಾರದ ತಮ್ಮ ಯೋಜನೆಗಳನ್ನು ಆರಂಭಿಸಿದ್ದರೂ ಅವರುಗಳು ಆಯ್ಕೆ ಮಾಡಿದ ಕಾರ್ಯ ಕ್ಷೇತ್ರ ಭಿನ್ನವಾಗಿತ್ತು. ರೈಫಿಜಾನ್‌ರು ಗ್ರಾಮೀಣ ಪ್ರದೇಶವನ್ನು ಆಯ್ಕೆ ಮಾಡಿಕೊಂಡರೆ ಷೂಲ್ಸ್ ರವರು ಪಟ್ಟಣ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡರು. . . .

(ಮುಂದುವರೆಯುವುದು)

ಕೃಪೆ : ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1) ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.**

a) ಅಲ್ಪಾವಧಿ ಕೃಷಿ ಸಾಲ (ಪತ್ತು) ಸಹಕಾರ ಸಂಘ.

b) ದೀರ್ಘಾವಧಿ ಕೃಷಿ ಸಾಲ ಸಹಕಾರ ಸಂಘ.

c) ಕೃಷಿ ಪತ್ತೇತರ (ಸಾಲೇತರ) ಸಹಕಾರ ಸಂಘ.

d) ಮೇಲಿನ ಮೂರು ಆಗಿರುವುದಿಲ್ಲ.

**2) ಪಟ್ಟಣ ಸಹಕಾರ ಬ್ಯಾಂಕುಗಳು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.**

a) ಅಲ್ಪಾವಧಿ ಕೃಷಿ ಪತ್ತಿನ ಸಹಕಾರ ಸಂಘ.

b) ಕೃಷಿಯೇತರ ಪತ್ತಿನ ಸಹಕಾರ ಸಂಘ.

c) ಕೃಷಿಯೇತರ ಪತ್ತೇತರ ಸಹಕಾರ ಸಂಘ.

d) ಮೇಲಿನ ಮೂರು ಆಗಿರುವುದಿಲ್ಲ.

**3) ನೇಕಾರರ ಸಹಕಾರ ಸಂಘಗಳು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.**

a) ಕೃಷಿಯೇತರ ಪತ್ತಿನ ಸಹಕಾರ ಸಂಘಗಳು.

b) ಕೃಷಿ ಪತ್ತೇತರ ಸಹಕಾರ ಸಂಘಗಳು.

c) ಕೃಷಿಯೇತರ ಮತ್ತು ಪತ್ತೇತರ ಸಹಕಾರ ಸಂಘ

d) ಮೇಲಿನ ಮೂರು ಆಗಿರುವುದಿಲ್ಲ.

**4) ಗೃಹನಿರ್ಮಾಣ ಸಹಕಾರ ಸಂಘಗಳು**

a) ಕೃಷಿಯೇತರ ಪತ್ತಿನ ಸಹಕಾರ ಸಂಘಗಳು.

b) ಕೃಷಿಯೇತರ ಮತ್ತು ಪತ್ತೇತರ ಸಹಕಾರ ಸಂಘಗಳೂ

ಛಿ) ಕೃಷಿ ಪತ್ತೇತರ ಸಹಕಾರ ಸಂಘ

ಜ) ಮೇಲಿನ ಮೂರು ಆಗಿರುವುದಿಲ್ಲ.

**5) ಹಾಲು ಉತ್ಪಾದಕರ ಸಹಕಾರ ಸಂಘ ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.**

a) ಕೃಷಿಯೇತರ ಮತ್ತು ಪತ್ತೇತರ ಸಹಕಾರ ಸಂಘ.

b) ಕೃಷಿಯೇತರ ಪತ್ತಿನ ಸಹಕಾರ ಸಂಘ

c) ಕೃಷಿ ಪತ್ತೇತರ ಸಹಕಾರ ಸಂಘ

d) ಮೇಲಿನ ಮೂರು ಆಗಿರುವುದಿಲ್ಲ.

**6) ಭಾರತ ಸಹಕಾರ ಪತ್ತಿನ ಕಾಯ್ದೆ ಜಾರಿಗೆ ಬಂದ ವರ್ಷ.**

a) 1906

b) 1908

c) 1904

ಜ) 1914

**7) ಭಾರತ ಸಹಕಾರ ಪತ್ತಿನ ಕಾಯ್ದೆ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಆರಂಭಗೊಂಡ ಸಹಕಾರ ಸಂಘಗಳನ್ನು ______ ಕರೆಯಲಾಯಿತು.**

a) ವ್ಯವಸಾಯ ಸೇವ ಸಹಕಾರ ಸಂಘಗಳು.

b) ಸೇವ ಸಹಕಾರ ಸಂಘಗಳು

c) ರೈತರ ಸೇವ ಸಹಕಾರ ಸಂಘಗಳು

d) ಮೇಲಿನ ಮೂರು ಆಗಿರುವುದಿಲ್ಲ.

**8) 'ತಕಾವಿ' ಸಾಲ ಎಂದರೆ**

a) ರೈತರಿಗೆ ಬೇಳೆ ಕಠಾವು ಮಾಡಲು ಮತ್ತು ಬಿತ್ತನೆ ಮಾಡಲು ಅಗತ್ಯ ಬಂಡವಾಳ ಒದಗಿಸುವ ಸಾಲ.

b) ರೈತರಿಗೆ ದಿನನಿತ್ಯ ಅಗತ್ಯತೆಗೆ ಪೂರೈಕೆ ಮಾಡಲು ನೀಡುವ ಸಾಲ.

c) ರೈತರಿಗೆ ಋಣ ಮುಕ್ತ ಮಾಡಲು ನೀಡುವ ಸಾಲ.

d) ಮೇಲಿನ ಮೂರು ಆಗಿರುವುದಿಲ್ಲ.

**9) ಅಲ್ಪಾವಧಿ ಕೃಷಿ ಸಾಲವು______**

a) ಹೂಡಿಕೆ ಸಾಲ

b) ದುಡಿಯುವ ಬಂಡವಾಳ ಸಾಲ

c) ಮೇಲಿನ ಮತ್ತು (ಎ) ಮತ್ತು (ಬಿ)

d) ಮೇಲಿನ ಮೂರು ಆಗಿರುವುದಿಲ್ಲ.

**10) ಎ.ಡಿ.ಗೊರವಾಲ ಸಮಿತಿ (ಅಖಿಲ ಭಾರತ ಗ್ರಾಮೀಣ ಪತ್ತು ಸಮೀಕ್ಷೆ ಸಮಿತಿ) ರಚನೆಯಾದ ವರ್ಷ**

a) 1951 b) 1954

c) 1952 d) 1958

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

1 - B, 2 - C, 3 – D, 4 – C, 5 – C, 6 – C, 7 – A, 8 – B, 9 – D, 10 – B